₹ 4 | ಪುಟ: 4 | ಸಂಪುಟ: 4 | ಸಂಚಿಕೆ 87 | newsbelagavi@gmail.com | 9900332089 | 9900332089



# ಬೆಳಗಾವಿ ವರದಿ

ಕನ್ನಡ ದಿನಪತ್ರಿಕೆ

ಪ್ರಧಾನ ಸಂಪಾದಕರು: ಸತೀಶ್.ಬಿ.ಜಿ

BELAGAVI VARADI KANNADA DAILY

Volume : 4 | Issue: 87 | Friday, 19, MAY, 2023 | RNI: KARKAN/2020/79084 | Regn,No:G-2/PMG/KA/NK/BM/139/2021-23 | 24


# ಸಿದ್ದರಾಮಯ್ಯ ಸಿಎಂ – ಡಿಕೆ ಶಿವಕುಮಾರ್ ಡಿಸಿಎಂ

## ನಾಳೆ ಸಿದ್ದರಾಮಯ್ಯ, ಡಿಕೆ.ಶಿವಕುಮಾರ್ ಪ್ರಮಾಣವಚನ ಸ್ವೀಕಾರ: ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್

ಬೆಂಗಳೂರು: ರಾಜ್ಯದ ಮುಖ್ಯಮಂತ್ರಿ ಆಯ್ಕೆ ಪ್ರಹಸನ ಕೊನೆಗೂ ಮುಕ್ತಾಯಗೊಂಡಿದ್ದು, ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿಯಾಗಿ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರನ್ನು ಉಪಮುಖ್ಯಮಂತ್ರಿಯಾಗಿ ಕಾಂಗ್ರೆಸ್ ಹೈಕಮಾಂಡ್ ಅಧಿಕೃತವಾಗಿ ಘೋಷಣೆ ಮಾಡಿದೆ

ನವದೆಹಲಿಯ ಎಐಸಿಸಿ ಕಚೇರಿಯಲ್ಲಿ ಕಾಂಗ್ರೆಸ್ ನಾಯಕರು ಜಂಟಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ್ದು, ಈ ವೇಳೆ ನಾಯಕರು ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿಯಾಗಿ ಡಿಕೆ.ಶಿವಕುಮಾರ್ ಅವರನ್ನು ಆಯ್ಕೆ ಮಾಡಿರುವುದಾಗಿ ಹೇಳಿದ್ದಾರೆ.

ಕರ್ನಾಟಕದ ಗೆಲುವಿನ ಶ್ರೇಯಸ್ಸು ಸೋನಿಯಾ ಗಾಂಧಿ, ಪ್ರಿಯಾಂಕಾ ಗಾಂಧಿ, ರಾಹುಲ್ ಗಾಂಧಿ ಸೇರಿ ಎಲ್ಲ ಹಿರಿಯ ನಾಯಕರಿಗೂ ಸಲ್ಲುತ್ತದೆ. ಭಾರತ್ ಜೋಡೋ ಪಾದಯಾತ್ರೆ ಬಳಿಕ ಕಾಂಗ್ರೆಸ್



ಗೆದ್ದಿದೆ. ಕರ್ನಾಟಕದಲ್ಲಿ ಅನುಭವಿ, ಸಮರ್ಥ ಕಾಂಗ್ರೆಸ್ ನಾಯಕರಿದ್ದಾರೆ. ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಪಕ್ಷವನ್ನು ಸಂಘಟಿಸಿದ್ದಾರೆ. ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಇಬ್ಬರೂ ಸಮರ್ಥ ನಾಯಕರು ಎಂದು ಹೇಳಿದರು.

ಡಿಕೆ ಶಿವಕುಮಾರ್ ಒಬ್ಬರು ಮಾತ್ರ ಡಿಸಿಎಂ ಆಗಿರುತ್ತಾರೆ. ಲೋಕಸಭಾ ಚುನಾವಣೆ ಪೂರ್ಣಗೊಳ್ಳುವವರೆಗೂ ಕೆಪಿಸಿಸಿ ಅಧ್ಯಕ್ಷರಾಗಿ ಡಿಕೆ ಶಿವಕುಮಾರ್ ಮುಂದುವರಿಯಲಿದ್ದಾರೆಂದು ತಿಳಿಸಿದರು.

ಮೇ 20ರಂದು ಸಿದ್ದರಾಮಯ್ಯ, ಡಿಕೆ.ಶಿವಕುಮಾರ್ ಪ್ರಮಾಣವಚನ ಸ್ವೀಕರಿಸುತ್ತಾರೆ. ಮೇ 20ರ ಮಧ್ಯಾಹ್ನ 12.30ಕ್ಕೆ ಪದಗ್ರಹಣ ಸಮಾರಂಭ ನಡೆಯಲಿದೆ. ಮೇ 20ರಂದು ಕೆಲ ಶಾಸಕರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸುತ್ತಾರೆಂದು ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರು ಮಾಹಿತಿ ನೀಡಿದ್ದಾರೆ.

ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಗೆ ಮೂರು ವೀಕ್ಷಕರನ್ನ ನೇಮಿಸಲಾಗಿತ್ತು. ಶಾಸಕರ ಅಭಿಪ್ರಾಯ ಸಂಗ್ರಹ ಮಾಡಲಾಗಿತ್ತು. ವೀಕ್ಷಕರು ವರದಿಯನ್ನ ಅಧ್ಯಕ್ಷರಿಗೆ ನೀಡಿದ್ದರು. ನಮ್ಮದು ಪ್ರಜಾಸತ್ತಾತ್ಮಕ ಪಕ್ಷ, ನಾವು ಸರ್ವಾಧಿಕಾರದಲ್ಲಿ ನಂಬಿಕೆ ಇಟ್ಟವರಲ್ಲ. ಕರ್ನಾಟಕದಲ್ಲಿ ಡೈನಾಮಿಕ್ ನಾಯಕರಿದ್ದಾರೆ. ಸಿದ್ದರಾಮಯ್ಯ ಅನುಭವಿ, ಹಿರಿಯ ರಾಜಕಾರಣಿ, ಉತ್ತಮ ಆಡಳಿತಗಾರರು ಹೌದು. ಚುನಾವಣೆಯಲ್ಲಿ ಸಿದ್ದರಾಮಯ್ಯ ಅವರದ್ದು ದೊಡ್ಡ ಪಾತ್ರವಿದೆ. ಡಿಕೆ ಶಿವಕುಮಾರ್ ಪಕ್ಷ ಸಂಘಟಕರು, ಪಕ್ಷದಲ್ಲಿ ಕೆಡಾರ್ ತಯಾರು ಮಾಡುವಲ್ಲಿ ಅವರ ಪಾತ್ರ ದೊಡ್ಡದಿದೆ ಎಂದರು.

ಡಿಕೆ ಶಿವಕುಮಾರ್,ಸಿದ್ದರಾಮಯ್ಯ ಇಬ್ಬರೂ ಪಕ್ಷದ ದೊಡ್ಡ ಆಸ್ತಿ, ಇಬ್ಬರಿಗೂ ಸಿಎಂ ಆಗಬೇಕೆಂಬ ಆಕಾಂಕ್ಷೆಯಿತ್ತು. ಸಹಜವಾಗಿಯೇ ಬಯಕೆ ಇತ್ತು. ಸಿದ್ದರಾಮಯ್ಯ, ಡಿಕೆ ಶಿವಕುಮಾರ್ ಜೊತೆ ಒನ್ ಟು ಒನ್ ಮಾತುಕತೆ ನಡೆಸಲಾಗಿತ್ತು. ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಿಯಾಂಕಾ ಗಾಂಧಿ ಅಭಿಪ್ರಾಯ ಪಡೆದಿದ್ದೇವು. ಅಂತಿಮವಾಗಿ ಎಐಸಿಸಿ ಅಧ್ಯಕ್ಷರು ನಿರ್ಣಯ ತೆಗೆದುಕೊಂಡಿದ್ದಾರೆ ಎಂದು ಕೆಸಿ ವೇಣುಗೋಪಾಲ್ ತಿಳಿಸಿದರು. ಇದೇ ವೇಳೆ ಅಧಿಕಾರ ಹಂಚಿಕೆ ಸೂತ್ರದ ಬಗ್ಗೆ ಯಾವುದೇ ಮಾಹಿತಿಯನ್ನೂ ನಾಯಕರು ನೀಡಲಿಲ್ಲ.

ಈ ನಡುವೆ ನವಹೆದಲಿಯ ರಾಜಾಜಿ ಮಾರ್ಗ10ರಲ್ಲಿರುವ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಿವಾಸದಲ್ಲಿರುವ ಸಿದ್ದರಾಮಯ್ಯ ಹಾಗೂ ಡಿಕೆ.ಶಿವಕುಮಾರ್ ಅವರು, ಇಂದು ಮಧ್ಯಾಹ್ನ 3 ಗಂಟೆಗೆ ದೆಹಲಿಯಿಂದ ಬೆಂಗಳೂರಿಗೆ ಆಗಮಿಸಲಿದ್ದಾರೆಂದು ತಿಳಿದುಬಂದಿದೆ.

## ನಾವು ಒಟ್ಟಾಗಿದ್ದೇವೆ: ಶಿವಕುಮಾರ್



ಬೆಂಗಳೂರು: ನೂತನ ಉಪ ಮುಖ್ಯಮಂತ್ರಿಯಾಗಿ ಕಾಂಗ್ರೆಸ್‌ನಿಂದ ಅಧಿಕೃತ ಘೋಷಣೆಯಾಗುತ್ತಲೇ ಟ್ವೀಟ್ ಮಾಡಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್ ಜನಕಲ್ಯಾಣ ಖಾತರಿಪಡಿಸುವಲ್ಲಿ ನಾವು ಒಗ್ಗಟ್ಟಾಗಿದ್ದೇವೆ ಎಂದು ಹೇಳಿದ್ದಾರೆ.

ಡಿ.ಕೆ ಶಿವಕುಮಾರ್ ಅವರು ಸರ್ಕಾರದಲ್ಲಿ ಏಕೈಕ ಡಿಸಿಎಂ ಆಗಿರಲಿದ್ದಾರೆ ಎಂದ ಅವರು, ಮುಂದಿನ ಲೋಕಸಭಾ ಚುನಾವಣೆ ವರೆಗೆ ಅವರೇ ಕೆಪಿಸಿಸಿ ಅಧ್ಯಕ್ಷರಾಗಿಯೂ ಮುಂದುವರಿಯಲಿದ್ದಾರೆ ಎಂದು ತಿಳಿಸಿದರು.

ಅತ್ತ ಅಧಿಕೃತ ಘೋಷಣೆಯಾಗುತ್ತಲೇ ಇತ್ತ ಟ್ವೀಟ್ ಮಾಡಿದ ಡಿ.ಕೆ ಶಿವಕುಮಾರ್, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮತ್ತು ಸಿದ್ದರಾಮಯ್ಯ ಅವರೊಂದಿಗಿನ ಚಿತ್ರವೊಂದನ್ನು ಹಂಚಿಕೊಂಡರು.

'ಕರ್ನಾಟಕದ ಸುಭದ್ರ ಭವಿಷ್ಯ ಮತ್ತು ಜನಕಲ್ಯಾಣ ನಮ್ಮ ಪ್ರಮುಖ ಆದ್ಯತೆಯಾಗಿದೆ. ಅದನ್ನು ಖಾತರಿಪಡಿಸುವಲ್ಲಿ ನಾವು ಒಗ್ಗಟ್ಟಾಗಿದ್ದೇವೆ' ಎಂದು ಬರೆದಿದ್ದಾರೆ.

## ಪ್ರಮಾಣ ವಚನಕ್ಕೆ ಹಲವು ಗಣ್ಯರಿಗೆ ಆಹ್ವಾನ

ಛತ್ತೀಸ್‌ಗಢ ಮುಖ್ಯಮಂತ್ರಿ ಭೂಪೇಶ್ ಬಘೇಲ್, ರಾಜಸ್ಥಾನ ಮುಖ್ಯಮಂತ್ರಿ ಆಶೋಕ್ ಗೆಹಲೋತ್, ಹಿಮಾಚಲ ಪ್ರದೇಶ ಸಿಎಂ ಸುಖ್ವಿಂದರ್ ಸಿಂಗ್ ಸುಖು, ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್, ಒಡಿಶಾ ಮುಖ್ಯಮಂತ್ರಿ ನವೀನ್ ಪಟ್ನಾಯಕ್, ತಮಿಳುನಾಡು ಸಿಎಂ ಎಂ.ಕೆ ಸ್ಟಾಲಿನ್, ತೆಲಂಗಾಣ ಸಿಎಂ ಚಂದ್ರಶೇಖರ್ ರಾವ್, ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ಸಮಾಜವಾದಿ ಪಕ್ಷದ ಮುಖ್ಯಸ್ಥ ಅಖಿಲೇಶ್ ಯಾದವ್, ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್, ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಉದ್ಧವ್ ಠಾಕ್ರೆ, ಬಿಹಾರ ಉಪಮುಖ್ಯಮಂತ್ರಿ ತೇಜಸ್ವಿ ಯಾದವ್, ನ್ಯಾಶನಲ್ ಕಾನ್ಫರೆನ್ಸ್ ಮುಖ್ಯಸ್ಥ ಫಾರೂಕ್ ಅಬ್ದುಲ್ಲಾ ಅವರನ್ನು ಆಹ್ವಾನಿಸಲಾಗಿದೆ.

## ಸಿಎಂ ಆಯ್ಕೆ ಅಧಿಕೃತ ಘೋಷಣೆ ಬೆನ್ನಲ್ಲೇ ಗ್ಯಾರೆಂಟಿಗಳ ಬಗ್ಗೆ ಸಿದ್ದರಾಮಯ್ಯ ಖಡಕ್ ಮಾತು



ಬೆಂಗಳೂರು: ರಾಜ್ಯದ ಮುಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಎಂದು ಎಐಸಿಸಿ ಅಧಿಕೃತ ಘೋಷಣೆ ಮಾಡಿದ್ದು, ಇದರ ಬೆನ್ನಲ್ಲೇ ಬಗ್ಗೆ ಸಿದ್ದರಾಮಯ್ಯ ಅವರು ಖಡಕ್ ಆಗಿ ಪಕ್ಷದ ಗ್ಯಾರಂಟಿ ಘೋಷಣೆಗಳ ಮಾತನಾಡಿದ್ದಾರೆ.

ಸಿಎಂ ಘೋಷಣೆ ಬಳಿಕ ಮೊದಲ ಬಾರಿಗೆ ಟ್ವೀಟ್ ಮೂಲಕ ಪ್ರತಿಕ್ರಿಯಿಸಿರುವ ಅವರು, ಕನ್ನಡಿಗರ ಹಿತ ರಕ್ಷಣೆಗೆ ನಮ್ಮ ಕೈಗಳು ಸದಾ ಒಂದಾಗಿರಲಿದೆ. ಜನಪರ, ಪಾರದರ್ಶಕ, ಭ್ರಷ್ಟಾಚಾರ ರಹಿತ ಆಡಳಿತ ನೀಡುವ ಜೊತೆಗೆ ನಮ್ಮ ಎಲ್ಲಾ ಗ್ಯಾರೆಂಟಿಗಳನ್ನು ಈಡೇರಿಸಲು ಕಾಂಗ್ರೆಸ್ ಪಕ್ಷ ಒಂದು ಕುಟುಂಬವಾಗಿ ಕೆಲಸ ಮಾಡಲಿದೆ ಎಂದು ಹೇಳಿದ್ದಾರೆ.

ಈ ಬಾರಿಯ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭೂತಪೂರ್ವ ಗೆಲುವು ಸಾಧಿಸಿದೆ. ಬರೋಬ್ಬರಿ 135 ಸ್ಥಾನಗಳನ್ನು ಗೆಲ್ಲುವ ಮೂಲಕ ಬಿಜೆಪಿ, ಜೆಡಿಎಸ್ ಹಾಗೂ ಇತರರಿಗೂ ಬಿಸಿ ಮುಟ್ಟಿಸಿದೆ.

ಈ ಗೆಲುವಿಗೆ ಕಾಂಗ್ರೆಸ್ ಘೋಷಿಸಿರುವ 5 ಗ್ಯಾರಂಟಿ ಯೋಜನೆಗಳ ಪಾಲೂ ದೊಡ್ಡದಿದೆ. ಚುನಾವಣೆಗೂ ಮುನ್ನವೇ ರಾಜ್ಯದ ಜನಸಾಮಾನ್ಯರು, ಗೃಹಿಣಿಯರು, ನಿರುದ್ಯೋಗಿಗಳು, ರೈತರು ಸೇರಿದಂತೆ ಹಲವು ವರ್ಗಗಳವನ್ನು ಗುರುಯಾಗಿಸಿಕೊಂಡು 5 ಗ್ಯಾರಂಟಿಗಳನ್ನು ಕಾಂಗ್ರೆಸ್ ಘೋಷಿಸಿದ್ದು, ಇದೀಗ ಆ 5 ಗ್ಯಾರಂಟಿಗಳನ್ನು ಈಡೇರಿಸಬೇಕೆಂದು ರಾಜ್ಯಾದ್ಯಂತ ಜನಸಾಮಾನ್ಯರ ಕೂಗು ಜೋರಾಗುತ್ತಿದೆ.

## ಸಂವಿಧಾನ ಉಳಿಸಲು ಬಯಸುವವರು ಪ್ರಮಾಣ ವಚನ ಸಮಾರಂಭದಲ್ಲಿ ಭಾಗವಹಿಸಬಹುದು: ಸುರ್ಜೇವಾಲಾ



ನವದೆಹಲಿ: ಪ್ರಜಾಪ್ರಭುತ್ವಕ್ಕಾಗಿ ಹೋರಾಡಲು ಮತ್ತು ಸಂವಿಧಾನವನ್ನು ಉಳಿಸಲು ಬಯಸುವವರು ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಭಾಗವಹಿಸಬಹುದು ಎಂದು ಕರ್ನಾಟಕದ ಎಐಸಿಸಿ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಗುರುವಾರ ಹೇಳಿದ್ದಾರೆ.

## ಬೇಸರ ಆಗಿದೆ, ಪಕ್ಷದ ಹಿತ ಮುಖ್ಯ: ಡಿ.ಕೆ. ಸುರೇಶ್



ನವದೆಹಲಿ: ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿಯಾಗಿಯೂ, ಡಿ.ಕೆ ಶಿವಕುಮಾರ್ ಅವರನ್ನು ಉಪಮುಖ್ಯಮಂತ್ರಿಯನ್ನಾಗಿ ಮಾಡಿರುವ ಕಾಂಗ್ರೆಸ್ ಹೈಕಮಾಂಡ್ ನಿರ್ಧಾರದಿಂದ ಬೇಸರವಾಗಿದೆ ಎಂದು ಸಂಸದ ಡಿ.ಕೆ ಸುರೇಶ್ ಹೇಳಿದ್ದಾರೆ.

ಎಎನ್‌ಐ ಸುದ್ದಿ ಸಂಸ್ಥೆಯೊಂದಿಗೆ ಅವರು ಮಾತನಾಡಿದರು.

'ನಾನು ಸಂಪೂರ್ಣವಾಗಿ ಸಂತುಷ್ಟನಾಗಿಲ್ಲ. ಆದರೆ ಕರ್ನಾಟಕದ ಜನರ ಹಿತಾಸಕ್ತಿಗಾಗಿ, ನಾವು ನಮ್ಮ ಬದ್ಧತೆಯನ್ನು ಪೂರೈಸುವುದಕ್ಕಾಗಿ, ಡಿ.ಕೆ ಶಿವಕುಮಾರ್ ಅವರು ಹೈಕಮಾಂಡ್ ನಿರ್ಧಾರವನ್ನು ಒಪ್ಪಿಕೊಂಡಿದ್ದಾರೆ. ಭವಿಷ್ಯದಲ್ಲಿ ನೋಡೋಣ. ಹಾದಿ ಇನ್ನೂ ದೀರ್ಘವಾಗಿದೆ' ಎಂದು ಹೇಳಿದ್ದಾರೆ.

ಡಿ.ಕೆ ಶಿವಕುಮಾರ್ ಅವರು ಮುಖ್ಯಮಂತ್ರಿಯಾಗುವುದನ್ನು ನಾನು ಬಯಸಿದ್ದೆ. ಆದರೆ ಅದು ಆಗಲಿಲ್ಲ. ಕಾದು ನೋಡೋಣ' ಎಂದು ಅವರು ಹೇಳಿದ್ದಾರೆ.

ಸಿದ್ದರಾಮಯ್ಯ ಹಾಗೂ ಡಿ.ಕೆ ಶಿವಕುಮಾರ್ ಅವರ ಪ್ರಮಾಣವಚನ ಸ್ವೀಕಾರ ಸಮಾರಂಭವು ಮೇ 20 ರಂದು ಬೆಂಗಳೂರಿನಲ್ಲಿ ನಡೆಯಲಿದೆ. ಅಂದು ಕೆಲ ಶಾಸಕರು ಸಚಿವರಾಗಿ ಪ್ರಮಾಣವಚನ ಸ್ವೀಕಾರ ಮಾಡಲಿದ್ದಾರೆ.

## ರಾಜ್ಯದಲ್ಲಿ ಒಳ್ಳೆಯ ಆಡಳಿತ ನೀಡುತ್ತೇವೆ: ಶಾಸಕ ಸತೀಶ ಜಾರಕಿಹೊಳಿ



ಬೆಂಗಳೂರು: ಹೈಕಮಾಂಡ ಒಮ್ಮತ ಮೇರೆಗೆ ಸಿಎಂ ಹಾಗೂ ಡಿಸಿಎಂ ಹುದ್ದೆಗಳನ್ನು ನೀಡಲಾಗಿದೆ. ಇದು ಯಾವುದು ಶಾಸಕರಿಗೂ ಗೋತ್ತಿಲ್ಲ, ಉತ್ತರ ಕರ್ನಾಟಕ ಅಭಿವೃದ್ಧಿಗೆ ಇದು ಒಳ್ಳೆಯ ಬೆಳವಣಿಗೆ. ಡಿಕೆಶಿವಕುಮಾರ್ ಅವರಿಗೆ ಇನ್ನು ಸಾಕಷ್ಟು ವಯಸ್ಸು ಇದೆ, ಅವಕಾಶಗಳಿವೆ ಸಿಎಂ ಆದರೂ ಆಗಬಹುದು ಎಂದು ಶಾಸಕ ಸತೀಶ ಜಾರಕಿಹೊಳಿ ಹೇಳಿದರು.

ಬೆಂಗಳೂರಿನಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದಅವರು, ನೂತನವಾಗಿ ಆಯ್ಕೆಯಾಗಿರುವ ಶಾಸಕರು ಸಿಎಂ ಪರ ಹಾಗೂ ಕೆಪಿಸಿಸಿ ಅಧ್ಯಕ್ಷರಾದ ಡಿಕೆಶಿವಕುಮಾರ್ ಪರವಾಗಿ ಇದ್ದಾರೆ. ಸರ್ಕಾರಕ್ಕೆ ಬೆಂಬಲ ನೀಡುವುದು ನಮ್ಮ ಆದ್ಯತೆ ಎಂದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ ಎಂದರೇ ವಿಜಯೋತ್ಸವ ಜತೆ ಪಕ್ಷವನ್ನು ಗಟ್ಟಿಗೋಳಿಸಬೇಕಾಗಿದೆ. ರಾಜ್ಯದಲ್ಲಿ ಒಳ್ಳೆಯ ಆಡಳಿತ ನೀಡುವ ಉದ್ದೇಶ ಒಂದೇ ನಮ್ಮ ಗುರಿಯಾಗಿದೆ ಎಂದರು.

## ಸಿದ್ದರಾಮಯ್ಯ ನಿವಾಸದತ್ತ ಅಭಿಮಾನಿಗಳ ದಂಡು

ಬೆಂಗಳೂರು: ಮಾಜಿ ಸಿಎಂ ಸಿದ್ದರಾಮಯ್ಯ ಎರಡನೇ ಬಾರಿ ಮುಖ್ಯಮಂತ್ರಿಯಾಗಿ ಆಯ್ಕೆ ಎಂದು ಅಧಿಕೃತವಾಗಿ ಘೋಷಣೆಯಾಗುತ್ತಿದ್ದಂತೆ ಬೆಂಗಳೂರಿನ ಸಿದ್ದರಾಮಯ್ಯ ನಿವಾಸದತ್ತ ಅಭಿಮಾನಿಗಳು ಸಾಗರೋಪಾದಿಯಲ್ಲಿ ಧಾವಿಸುತ್ತಿದ್ದು, ಸಂಭ್ರಮಾಚರಣೆಯಲ್ಲಿ ತೊಡಗಿದ್ದಾರೆ.


ಬೆಂಗಳೂರಿನ ಕುಮಾರಕೃಪಾ ರಸ್ತೆಯಲ್ಲಿರುವ ಸಿದ್ದರಾಮಯ್ಯನವರ ಸರ್ಕಾರಿ ನಿವಾಸದ ಬಳಿ ಸಿದ್ದರಾಮಯ್ಯ ಬೆಂಬಲಿಗರು, ಅಭಿಮಾನಿಗಳು ಆಗಮಿಸಿದ್ದು, ನಾದಸ್ವರ, ಮಂಗಳವಾದ್ಯದ ಮೂಲಕ ಶುಭಕೋರಿದ್ದಾರೆ. ನೂರಾರು ಅಭಿಮಾನಿಗಳು ನಾದಸ್ವರಕ್ಕೆ ಹೆಜ್ಜೆಹಾಕಿ ಕುಣಿದು ಕುಪ್ಪಳಿಸಿದ್ದಾರೆ.

ಇನ್ನೊಂದೆಡೆ ಸಿದ್ದರಾಮಯ್ಯನವರ ಬೃಹತ್ ಭಾವಚಿತ್ರಕ್ಕೆ ಕ್ಷೀರಾಭಿಷೇಕ ಮಾಡಿ ಜಯಘೋಷಗಳನ್ನು ಕೂಗುತ್ತಿದ್ದರೆ, ಮತ್ತೊಂದೆಡೆ ಸಿದ್ದರಾಮಯ್ಯ 2.0 ಎಂಬ ಬರಹವುಳ್ಳ 7 ಕೆಜಿ ತೂಕದ ಕೇಕ್ ಕಟ್ ಮಾಡಿ ಸಂಭ್ರಮಾಚರಣೆ ನಡೆಸಿದ್ದಾರೆ.

## ವಿಟಿಯು ಅಂತರ ಕಾಲೇಜು ರಾಜ್ಯ ಮಟ್ಟದ ಅಥ್ಲೆಟಿಕ್ ಕೂಟ

ಬೆಳಗಾವಿ: ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ "ರಜತ ಮಹೋತ್ಸವ" ಅಂಗವಾಗಿ 2023 ಮೇ 21ನೇ ರಿಂದ 24ನೇ ರವರಿಗೆ ರಂದು '24 ನೇ ವಿಟಿಯು ಅಂತರ ಕಾಲೇಜು ರಾಜ್ಯ ಮಟ್ಟದ ಅಥ್ಲೆಟಿಕ್ ಕೂಟ' ವನ್ನು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಇದರ ಉದ್ಘಾಟನಾ ಸಮಾರಂಭ ರವಿವಾರ, ದಿನಾಂಕ 21.05.2023 ರಂದು ಬೆಳಗ್ಗೆ 9 ಗಂಟೆಗೆ ವಿ.ತಾ.ವಿ.ಯ ಮೈದಾನದಲ್ಲಿ ಜರುಗುವುದು. ಉದ್ಘಾಟನಾ ಸಮಾರಂಭಕ್ಕೆ ಅಂತ ರಾಷ್ಟ್ರೀಯ ಕ್ರೀಡಾಪಟು ಒಲಿಂಪಿಕ್ ಕ್ರೀಡೆಯಲ್ಲಿ ಭಾಗವಹಿಸಿದ ಹಾಗೂ ಹೈಜಂಪ್ (ಎತ್ತರದ ಜಿಗಿತ) ರಾಷ್ಟ್ರ ಮಟ್ಟದ ದಾಖಲೆಯನ್ನು ಹೊಂದಿರುವ ಸಹನಾ ಕುಮಾರಿ ಹಾಗೂ ಇವರ ಪತಿಯಾದ



ಅಂತರಾಷ್ಟ್ರೀಯ ಕ್ರೀಡಾಪಟು ನಾಗರಾಜ ಬಿ.ಜಿ., ಮುಖ್ಯ ಅತಿಥಿಗಳಾಗಿ ಜಂಟಿಯಾಗಿ ಈ ಕ್ರೀಡಾ ಕೂಟವನ್ನು ಉದ್ಘಾಟಿಸಲಿದ್ದಾರೆ. ವಿ.ತಾ.ವಿ.ಯ ಕುಲಪತಿಗಳಾದ ಪ್ರೊ. ವಿದ್ಯಾಶಂಕರ ಎಸ್. ಅಧ್ಯಕ್ಷತೆಯನ್ನು ವಹಿಸುವರು.

ಈ ಒಂದು ಕ್ರೀಡಾ ಕೂಟದಲ್ಲಿ 700 ಕ್ಕಿಂತ ಹೆಚ್ಚಿನ ವಿದ್ಯಾರ್ಥಿನಿಯರು ಸೇರಿ ಸುಮಾರು 1500 ಕ್ರೀಡಾಪಟುಗಳು ವಿ.ತಾ.ವಿಯ ಅಧಿನದಲ್ಲಿ ಬರುವ ಬೇರೆ ಬೇರೆ ಮಹಾವಿದ್ಯಾಲಯಗಳಿಂದ 25 ಬೇರೆ ಬೇರೆ ಕ್ರೀಡೆಗಳಲ್ಲಿ ಭಾಗವಹಿಸುತ್ತಿದ್ದಾರೆ.

ಬೆಳಗಾವಿ ನಗರದ ವಿ.ತಾ.ವಿ.ಯ ತಾಂತ್ರಿಕ ಮಹಾವಿದ್ಯಾಲಯಗಳು, ಕೆಎಸ್‌ಆರ್ಪಿ, ಮಚ್ಛೆ, ಸಮಾಜ ಕಲ್ಯಾಣ ಇಲಾಖೆ, ಬೆಳಗಾವಿ ಮತ್ತು ಇನಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಇವರು ಕ್ರೀಡಾ ಕೂಟಕ್ಕೆ ಆಗಮಿಸುವ ಕ್ರೀಡಾಪಟುಗಳಿಗೆ ವಸತಿ ಹಾಗೂ ಸಾರಿಗೆ ವ್ಯವಸ್ಥೆಯ ಸೌಲಭ್ಯವನ್ನು ಕಲ್ಪಿಸಿಕೊಡಲಿದ್ದಾರೆ.

ನಾಲ್ಕು ದಿನಗಳ ನಡೆಯುವ ಈ ಕ್ರೀಡಾ ಕೂಟದ ಸಮಾರೋಪ ಸಮಾರಂಭವನ್ನು ಬುಧವಾರ, ದಿನಾಂಕ 24.05.2023 ರಂದ ಮಧ್ಯಾಹ್ನ 3.00 ಗಂಟೆಗೆ ನಡೆಯಲ್ಲಿದ್ದು ಬೆಳಗಾವಿ ನಗರದ ಪೊಲೀಸ್ ಆಯುಕ್ತರಾದ ಡಾ.ಎಂ. ಬಿ. ಬೋರಲಿಂಗಯ್ಯ ಮುಖ್ಯ ಅತಿಥಿಗಳಾಗಿ ಆಗಮಿಸುವರು. ಜಜಕುಲಪತಿ ಪ್ರೊ ವಿದ್ಯಾಶಂಕರ ಎಸ್ ಅವರು ಪತ್ರಿಕಾಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದರು.

## ಗ್ಯಾರಂಟಿ ಸ್ಕೀಮ್‌ಗಳ ಮಾನದಂಡ ಬಡವರಿಗೆ ಅನ್ವಯಿಸುವುದಿಲ್ಲ: ಶಾಸಕ ಸತೀಶ್ ಜಾರಕಿಹೊಳಿ

ಬೆಂಗಳೂರು: ಗ್ಯಾರಂಟಿ ಯೋಜನೆಗಳಿಗೆ ಮಾನದಂಡ ಹಾಕುತ್ತೇವೆ. ಗ್ಯಾರಂಟಿ ಸ್ಕೀಮ್‌ಗಳ ಮಾನದಂಡ ಬಡವರಿಗೆ ಅನ್ವಯಿಸುವುದಿಲ್ಲ. ಆದರೆ ಶ್ರೀಮಂತರಿಗೆ ಮಾನದಂಡ ಹಾಕುತ್ತೇವೆ. ಬಡವರಿಗೆ ಯಾವುದೇ ಮಾನದಂಡ ಇಲ್ಲ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ, ಶಾಸಕ ಸತೀಶ್ ಜಾರಕಿಹೊಳಿ ಹೇಳಿದ್ದಾರೆ.

ನಾನು ಡಿಸಿಎಂ ಸ್ಥಾನದ ಆಂಕಾಕ್ಷಿಯಲ್ಲ. ಆದರೆ ಬೇರೆ ಸಮುದಾಯದವರಿಗೆ ಡಿಸಿಎಂ ಸ್ಥಾನ ನೀಡಿದರೆ ನಾನು ಸಹ ಬೇಡಿಕೆ ಇಡುತ್ತೇನೆ. ಬೇರೆಯವರು ಕೇಳಿದರೆ ನಾನು ಸಹ ಎಸ್‌ಟಿ ಸಮುದಾಯದಿಂದ ನನಗೆ ಡಿಸಿಎಂ ಸ್ಥಾನ ಕೊಡಿ ಎಂದು ಕೇಳುತ್ತೇನೆ. ಅಂತಿಮವಾಗಿ



ಪಕ್ಷದ ನಿರ್ಧಾರಕ್ಕೆ ಬದ್ಧ ಎಂದು ಹೇಳಿದರು.

ನಾನು ಸಚಿವ ಸ್ಥಾನದ ಆಕಾಂಕ್ಷಿ. ಜನರಿಗೆ ಹತ್ತಿರ ಇರುವ, ಜನರ ಬಳಿ ಹೋಗುವ ಖಾತೆ ಕೇಳುತ್ತೇನೆ. 15 ಖಾತೆಗಳು ಜನರಿಗೆ ನೇರವಾಗಿ ಹತ್ತಿರ ಇದೆ. ಇದರಲ್ಲಿ ಯಾವುದಾದರೂ ಖಾತೆ ಕೊಡಲಿ. ನಮ್ಮ ಬೆಳಗಾವಿ ಜಿಲ್ಲೆಗೆ ಕನಿಷ್ಠ ಮೂರು ಸಚಿವ ಸ್ಥಾನ ಕೊಡಬೇಕು. ನಮ್ಮ ಜಿಲ್ಲೆಯಲ್ಲಿ 11 ಸ್ಥಾನ ಗೆದ್ದಿದ್ದೇವೆ. 3 ಸಚಿವ ಸ್ಥಾನ ಕೊಡಬೇಕು. ಗ್ಯಾರಂಟಿ ಸ್ಕೀಮ್‌ಗಳನ್ನು ಘೋಷಣೆ ಮಾಡಿದ್ದೇವೆ. ಅದನ್ನು ಜಾರಿ ಮಾಡುತ್ತೇವೆ. ಬಿಜೆಪಿಯವರು ಸಿಎಂ ಆಯ್ಕೆ ಮಾಡಲು 11 ದಿನ ತೆಗೆದುಕೊಂಡರು. ನಮ್ಮಲ್ಲಿ ಐದೇ ದಿನಕ್ಕೆ ಮುಗಿದಿದೆ ಎಂದು ಬಿಜೆಪಿಗೆ ಟಾಂಗ್ ನೀಡಿದರು.

## ಈ ಸರ್ಕಾರ ಹೆಚ್ಚು ದಿನ ಇರಲ್ಲ: ಶಾಸಕ ಅಭಯ್ ಪಾಟೀಲ್



ಬೆಳಗಾವಿ: ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಆಯ್ಕೆಯಾಗಿರುವ ವಿಚಾರವಾಗಿ ಪ್ರತಿಕ್ರಿಯಿಸಿರುವ ಬಿಜೆಪಿ ಶಾಸಕ ಅಭಯ್ ಪಾಟೀಲ್, ಈ ಸರ್ಕಾರ ಹೆಚ್ಚು ದಿನ ಇರುವುದಿಲ್ಲ ಎಂದು ಹೇಳಿದ್ದಾರೆ.

ಬೆಳಗಾವಿಯಲ್ಲಿ ಮಾತನಾಡಿದ ಅಭಯ್ ಪಾಟೀಲ್, ಕಾಂಗ್ರೆಸ್ ಗೆ ಬಹುಮತ ಸಿಕ್ಕಿದೆ. ಸಂಪೂರ್ಣ ಬಹುಮತ ಇದ್ದಾಗ ಸಿಎಂ ಘೋಷಣೆಗೆ ಒಂದು ಗಂಟೆ ಸಾಕು, ಆದರೆ ಇವರು ನಾಲ್ಕು ದಿನ ಪ್ಯಾಚ್ ಅಪ್ ಮಾಡಿದ್ದಾರೆ ಎಂದರೆ ತಿಳಿದುಕೊಳ್ಳಿ ಎಂದಿದ್ದಾರೆ.

ಸಿಎಂ ಆಯ್ಕೆಗೆ ನಾಲ್ಕು ದಿನ ತೆಗೆದುಕೊಂಡಿದ್ದರಿಂದ ಸರ್ಕಾರದ ಬಗ್ಗೆ ಈಗಲೇ ಜನ ವಿಶ್ವಾಸ ಕಳೆದುಕೊಂಡಿದ್ದಾರೆ.

ಸಿದ್ದರಾಮಯ್ಯ ಬಣ, ಡಿಕೆಶಿ ಬಣ ಚುನಾವಣೆ ಮೊದಲಿನಿಂದಲೂ ಇತ್ತು. ಚುನಾವಣೆ ಮುಗಿದ ಮೇಲೆ ಪ್ರಬಲವಾಗಿದೆ ಎಂದು ಟೀಕಿಸಿದರು.

## ಸಿಟಿ ಆಸ್ಪತ್ರೆ ಶೌಚಾಲಯದಲ್ಲಿ ವೈದ್ಯೆ ಶವವಾಗಿ ಪತ್ತೆ

ಬೆಂಗಳೂರು: ಹೆಬ್ಬಗೋಡಿಯ ನಾರಾಯಣ ಹೆಲ್ತ್ ಸಿಟಿ ಆಸ್ಪತ್ರೆ ಶೌಚಾಲಯದಲ್ಲಿ ವೈದ್ಯೆಯೊಬ್ಬರ ಮೃತದೇಹ ಮಂಗಳವಾರ ಪತ್ತೆಯಾಗಿದೆ.



ಮೃತ ವೈದ್ಯೆಯನ್ನು ತಮಿಳುನಾಡಿನ ತಂಜಾವೂರು ಮೂಲದ ಆರತಿ ಎಂದು ಗುರ್ತಿಸಲಾಗಿದೆ. ಆಸ್ಪತ್ರೆಯಲ್ಲಿ 2 ಗಂಟೆಗಳಿಂದ ವೈದ್ಯೆ ಎಲ್ಲಿಯೂ ಪತ್ತೆಯಾಗಿರಲಿಲ್ಲ. ನಂತರ ಶೌಚಾಲಯದಲ್ಲಿ ಪ್ರಜ್ಞಾಹೀನ ಸ್ಥಿತಿಯಲ್ಲಿ ಬಿದ್ದಿರುವುದು ಕಂಡು ಬಂದಿತ್ತು.

ವಿಷಕಾರಿ ಚುಚ್ಚುಮದ್ದಿನಿಂದಾಗಿ ವೈದ್ಯೆ ಮೃತಪಟ್ಟಿರುವುದಾಗಿ ಹೇಳಲಾಗುತ್ತಿದ್ದು, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ಆರಂಭಿಸಿದ್ದಾರೆ.

ಪ್ರಕರಣ ಸಂಬಂಧ ಆಸ್ಪತ್ರೆ ಹೇಳಿಕೆ ನೀಡಿದ್ದು, "ಮೇ 16 ರಂದು ಆಸ್ಪತ್ರೆಯ ಆವರಣದಲ್ಲಿ ವೈದ್ಯರೊಬ್ಬರು ಪ್ರಜ್ಞಾಹೀನ ಸ್ಥಿತಿ ಪತ್ತೆಯಾಗಿದ್ದರು. ಕೂಡಲೇ ಆಕೆಗೆ ಚಿಕಿತ್ಸೆ ನೀಡುವ ಕೆಲಸ ಮಾಡಲಾಯಿತು. ಆದರೆ, ಅವರು ಚಿಕಿತ್ಸೆಗೆ ಸ್ಪಂದಿಸಲಿಲ್ಲ.

ಸಾವಿಗೆ ಕಾರಣಗಳು ತಿಳಿದುಬಂದಿಲ್ಲ. ಪೊಲೀಸರಿಗೆ ಈ ಸಂಬಂಧ ಮಾಹಿತಿ ನೀಡಲಾಯಿತು. ಇದೀಗ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ತನಿಖೆ ನಡೆಸುತ್ತಿದ್ದಾರೆ. ತನಿಖೆಗೆ ಸಂಪೂರ್ಣವಾಗಿ ಸ್ಪಂದಿಸುತ್ತೇವೆ. ಮೃತ ವೈದ್ಯೆ ಕುಟುಂಬಕ್ಕೆ ಸಂತಾಪ ಸೂಚಿಸುತ್ತೇವೆಂದು ಹೇಳಿದೆ.

## ಧೃತಿಗೆಡುವ ಅಗತ್ಯ ಇಲ್ಲ, ಪಕ್ಷಕ್ಕೆ ಸೋಲು ಹೊಸದಲ್ಲ: ಕುಮಾರಸ್ವಾಮಿ



ರಾಮನಗರ: ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಪಕ್ಷದ ಹಿನ್ನಡೆಯ ಬಗ್ಗೆ ಕಾರ್ಯಕರ್ತರು ಧೃತಿಗೆಡುವ ಅಗತ್ಯ ಇಲ್ಲ. ಈ ಪಕ್ಷಕ್ಕೆ ಈ ರೀತಿಯ ಸೋಲು ಹೊಸದೇನಲ್ಲ. ಈ ಪಕ್ಷಕ್ಕೆ ಪ್ರಾಮಾಣಿಕ ಕಾರ್ಯಕರ್ತರ ಜೊತೆಗೆ ದೇವರ ಅನುಗ್ರಹವೂ ಇದೆ ಎಂದು ಮಾಜಿ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಅವರು ಜೆಡಿಎಸ್ ಕಾರ್ಯಕರ್ತರಿಗೆ ಧೈರ್ಯ ತುಂಬಿದರು.

ಚನ್ನಪಟ್ಟಣದಲ್ಲಿ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಮತದಾರರು ಹಾಗೂ ಜೆಡಿಎಸ್ ಮುಖಂಡರಿಗೆ ಎಚ್.ಡಿ. ಕುಮಾರಸ್ವಾಮಿ ಅವರು ಕೃತಜ್ಞತೆ ಸಲ್ಲಿಸಿದರು. ಚನ್ನಪಟ್ಟಣದ ನನ್ನ ಕಾರ್ಯಕರ್ತರು ಯಾರ ಆಮಿಷಕ್ಕೂ ಒಳಗಾಗದೆ ನನ್ನ ಕೈ ಹಿಡಿದಿದ್ದಾರೆ. ಹಲವಾರು ಕಡೆ ನಮ್ಮ ಪಕ್ಷಕ್ಕೆ ಹಿನ್ನಡೆ ಆಗಿದೆ. ಇದರಿಂದ ಪಕ್ಷದ ಕಾರ್ಯಕರ್ತರು ಧೃತಿಗೆಡುವ ಅಗತ್ಯ ಇಲ್ಲ. ಈ ಫಲಿತಾಂಶದಿಂದ ಹಲವರಿಗೆ ಗೊಂದಲ ಮತ್ತು ಆತಂಕ ಇದೆ. ಹಲವಾರು ಜನ ದೂರವಾಣಿ ಮೂಲಕ ಧೈರ್ಯ ತುಂಬುವ ಕೆಲಸ ಮಾಡುತ್ತಿದ್ದಾರೆ. ನೀವು ಧೈರ್ಯವಾಗಿ ಇರಿ, ಮುಂದಿನ ದಿನಗಳಲ್ಲಿ ಇನ್ನಷ್ಟು ಪಕ್ಷ ಕಟ್ಟೋಣ ಎನ್ನುವ ಆತ್ಮ ವಿಶ್ವಾಸದ ಮಾತುಗಳನ್ನಾಡುತ್ತಿದ್ದಾರೆ. ಚನ್ನಪಟ್ಟಣದಲ್ಲಿ ಪಕ್ಷ ಉಳಿಸಿದ್ದು ನೀವು. ಇಲ್ಲಿ ನಾನು ನೆಪಮಾತ್ರ. ಇನ್ನು 15 ದಿನಗಳಲ್ಲಿ ಪ್ರತಿ ಗ್ರಾಮಗಳಿಗೆ ಭೇಟಿ ನೀಡಲಿದ್ದೇನೆ ಎಂದು ಹೇಳಿದರು

## ಸರ್ಕಾರ ರಚನೆಯ ಹಕ್ಕು ಮಂಡಿಸಿದ ಸಿದ್ದರಾಮಯ್ಯ

ಬೆಂಗಳೂರು: ಮುಖ್ಯಮಂತ್ರಿಯಾಗಿ ಘೋಷಣೆಯಾದ ಬಳಿಕ ಸಿದ್ದರಾಮಯ್ಯ ಅವರು, ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರನ್ನು ಫೋನ್ ಮೂಲಕ ಸಂಪರ್ಕಿಸಿ ಮಾತುಕತೆ ನಡೆಸಿದ್ದಾರೆ. ಇದೇ ವೇಳೆ ಸರ್ಕಾರ ರಚನೆಯ ಹಕ್ಕು ಮಂಡಿಸಿದ್ದಾರೆ ಎಂದು ಮೂಲಗಳನ್ನು ಉಲ್ಲೇಖಿಸಿ ಎಎನ್‌ಐ ವರದಿ ಮಾಡಿದೆ.

ಕರ್ನಾಟಕದ ನಿಯೋಜಿತ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್ ಅವರೊಂದಿಗೆ ಫೋನ್‌ನಲ್ಲಿ ಮಾತನಾಡಿದ್ದಾರೆ. ರಾಜ್ಯಪಾಲರಿಗೆ ಹುಟ್ಟುಹಬ್ಬದ ಶುಭಾಶಯ ತಿಳಿಸಿದ ಸಿದ್ದರಾಮಯ್ಯ ಅವರು, ಪ್ರಮಾಣವಚನ ಸ್ವೀಕಾರ ಸಮಾರಂಭದ ಬಗ್ಗೆ ಮಾತುಕತೆ ನಡೆಸಿದ್ದಾರೆ. ಮೇ 20 ರಂದು ಮಧ್ಯಾಹ್ನ 12:30 ಗಂಟೆಗೆ ಪ್ರಮಾಣವಚನ ಸ್ವೀಕಾರ ಸಮಾರಂಭ ನಡೆಯಲಿದೆ. ರಾತ್ರಿ ರಾಜ್ಯಪಾಲರನ್ನು ಭೇಟಿ ಮಾಡಲಿರುವ ಸಿದ್ದರಾಮಯ್ಯ ಸರ್ಕಾರ ರಚನೆಗೆ ಹಕ್ಕುಮಂಡಿಸುವರು' ಎಂದು ಮೂಲಗಳಿಂದ ಗೊತ್ತಾಗಿದೆ.

ಈ ಮೊದಲು ಕಾಂಗ್ರೆಸ್ ಶಾಸಕ ಜಿ. ಪರಮೇಶ್ವರ ಅವರು, ಕಾಂಗ್ರೆಸ್ ಪಕ್ಷದ ಪ್ರತಿನಿಧಿಯಾಗಿ ರಾಜಭವನಕ್ಕೆ ತೆರಳಿ ರಾಜ್ಯಪಾಲರನ್ನು ಭೇಟಿ ಮಾಡಿದ್ದು, ಸರ್ಕಾರ ರಚನೆ ಬಗ್ಗೆ ಮಾಹಿತಿ ನೀಡಿದ್ದಾರೆ.



# ಅಹಿಂದ ನಾಯಕ; ಭಾಗ್ಯಗಳ ಸರದಾರ

## ರಾಜ್ಯ ಕಾಂಗ್ರೆಸ್ಸಿನ ಪ್ರಶ್ನಾತೀತ ನಾಯಕ; ಏಳು ಬಾರಿ ಬಜೆಟ್ ಮಂಡಿಸಿದ ವಿತ್ತ ನಿಪುಣ



ಎಚ್.ಮಾರುತಿ

ಸಿದ್ದರಾಮನಹುಂಡಿಯ ಸಿದ್ದರಾಮಯ್ಯ.. ಯಶಸ್ವಿ ಮುಖ್ಯಮಂತ್ರಿ, ನೇರ ಮತ್ತು ನಿಷ್ಠುರವಾದಿ. ರಾಜ್ಯ ಕಂಡ ಕಲರ್ ಫುಲ್ ರಾಜಕಾರಣಿ. ಏಳು ಬಾರಿ ಬಜೆಟ್ ಮಂಡಿಸಿದ ವಿತ್ತ ನಿಪುಣ ಕೂಡ. ಮೇಲಾಗಿ ಅಹಿಂದ ಮುಖಂಡ, ಭಾಗ್ಯಗಳ ಸರದಾರ. ಸದ್ಯದ ಮಟ್ಟಿಗೆ ರಾಜ್ಯ ಕಾಂಗ್ರೆಸ್ಸಿನ ಪ್ರಶ್ನಾತೀತ ನಾಯಕ, ಮಹಾ ದಂಡನಾಯಕ ಕೂಡ ಹೌದು.

ರಾಮಕೃಷ್ಣ ಹೆಗಡೆಯ ಚಾಣಕ್ಷತೆ, ದೇವೇಗೌಡರ ತಂತ್ರಗಾರಿಕೆ, ಜೆ.ಎಚ್. ಪಟೇಲರ ನೈಪುಣ್ಯತೆಯನ್ನ ಸಿದ್ದರಾಮಯ್ಯ ಮೈಗೂಡಿಸಿಕೊಂಡಿರುವ ನಿಪುಣ ರಾಜಕಾರಣಿ. ನೋಡಿ, ಸಿದ್ದರಾಮಯ್ಯ ರಾಜಕಾರಣಕ್ಕೆ ಧುಮುಕಿದ್ದೇ ಕಾಂಗ್ರೆಸ್ ಪಕ್ಷದ ದುರಾಡಳಿತದ ವಿರುದ್ಧ ದನಿ ಎತ್ತಿಕೊಂಡು. ಕುಟುಂಬ ರಾಜಕಾರಣವನ್ನ ಪ್ರಬಲವಾಗಿ ವಿರೋಧಿಸುತ್ತಲೇ ಬಂದ ಆ ನಾಯಕ ಕಡೆಗೆ ಸಿಎಂ ಗದ್ದುಗೆ ಏರಿದ್ದು ಮಾತ್ರ ಅದೇ ಕಾಂಗ್ರೆಸ್ ಪಕ್ಷದ ಮೂಲಕ.

**ಕನಸು ಕಾಣದೆ ನನಸು ಮಾಡಿಕೊಂಡ ಧೀರ**

ಸಿದ್ದರಾಮಯ್ಯಗೆ ಒಮ್ಮೆಯಾದ್ರೂ ನಾನು ಸಿಎಂ ಆಗಲೇಬೇಕು ಅನ್ನೋ ಕನಸು ಅವರಿಗೆ ಹೇಗಿತ್ತೋ ಈ ರಾಜ್ಯದ ಮುಕ್ಕಾಲಷ್ಟು ಜನರಿಗೆ ಸಿದ್ದರಾಮಯ್ಯರನ್ನ ಮುಖ್ಯಮಂತ್ರಿ ಕುರ್ಚಿಯಲ್ಲಿ ನೋಡೋ ಕನಸಿತ್ತು. ಆ ಮಟ್ಟಿಗೆ ರಾಜ್ಯದ ಜನರ ಜನಮಾನಸದಲ್ಲಿ ಛಾಪು ಮೂಡಿಸಿ ಕಡೆಗೂ ಎಲ್ಲರ ಆಸೆಯಂತೆ ಸಿಎಂ ಪಟ್ಟಗಿಟ್ಟಿಸಿಕೊಂಡರು.

ಮೈಸೂರು ತಾಲ್ಲೂಕಿನ ವರುಣಾ ಹೋಬಳಿಯ ಸಿದ್ದರಾಮಯ್ಯನ ಹುಂಡಿ ಅನ್ನೋ ಕುಗ್ರಾಮ ಸಿದ್ದರಾಮಯ್ಯನವರ ಹುಟ್ಟೂರು. ಹಿಂದುಳಿದ ಜಾತಿಯ, ಕೆಳವರ್ಗದ ರೈತಾಪಿ ಕುಟುಂಬದಲ್ಲಿ ಹುಟ್ಟಿಬೆಳೆದಿದ್ದು. ಕಾನೂನು ಪದವಿ ಪಡೆದು ವಕೀಲರಾಗಿದ್ದವರು ರಾಜ–ಕಾರಣ ಪ್ರವೇಶ ಮಾಡಿದ್ದು ಅವರ ಜೀವನದ ಮಹತ್ವದ ತಿರುವು.

ಏನೇ ಹೇಳಿ, ಹಳ್ಳಿಯಲ್ಲಿ ಹುಟ್ಟಿಬೆಳೆದ ಈ ಸಿದ್ದರಾಮಯ್ಯ ತಾವೊಬ್ಬ ರಾಜಕಾರಣಿಯಾಗ್ತೀನಿ. ಇಡೀ ನಾಡಿಗೇ ದೊರೆಯಾಗ್ತೀನಿ ಅನ್ನೋ ಕನಸುಕಂಡವರಲ್ಲ. ಮೈಸೂರಿನಲ್ಲಿ ಕಾನೂನು ಪದವಿ ಮುಗಿಸಿ ಕರಿಕೋಟು ತೊಟ್ಟು ಕೋರ್ಟ್ ಅಂಗಳಕ್ಕೆ ಇಳಿದ ಸಿದ್ದರಾಮಯ್ಯಗೆ ತಿರುವು ನೀಡಿದ್ದೇ ಜೆ.ಪಿ. ಚಳುವಳಿ.

**ಲೋಹಿಯಾವಾದ ಬೆನ್ನುಹತ್ತಿದ ಯುವ ನಾಯಕ**

ರೈತ ನಾಯಕ ಪ್ರೊ. ಎಂ.ಡಿ. ನಂಜುಂಡಸ್ವಾಮಿ ಅವರ ಸಂಪರ್ಕದಿಂದ ಜಯಪ್ರಕಾಶ್ ನಾರಾಯಣ–ರ ಸಮಾಜವಾದಿ ಹೋರಾಟಗಳ ಪ್ರಭಾವಕ್ಕೆ ಒಳಗಾದ ಸಿದ್ದರಾಮಯ್ಯ ನಂತರ ಲೋಹಿಯಾವಾದದ ಬೆನ್ನುಹತ್ತಿದವರು. ದೇವರಾಜ ಅರಸರ ಆಡಳಿತದ ಪ್ರಭಾವ ಸಿದ್ದರಾಮಯ್ಯರಿಗೆ ಹೊಸ ಮೈಲಿಗಲ್ಲನ್ನೇ ಹಾಕಿಕೊಟ್ಟಿತು. ಕಾಂಗ್ರೆಸ್ಸಿನಿಂದ ಹೊರಬಂದು ಕ್ರಾಂತಿ–ರಂಗ ಕಟ್ಟಿದ್ದ ಅರಸು ಅವರ ನೆರಳಿನಲ್ಲಿ ಅಬ್ದುಲ್ ನಜೀರ್ ಸಾಬ್, ಬಂಗಾರಪ್ಪ, ಜೆ.ಎಚ್. ಪಟೇಲ್ ರಂತಹ ಅನೇಕರಿದ್ದರು.

ನೋಡಿ, ಅಂತಹ ಸಂದರ್ಭ, 1978ರಲ್ಲಿ ಸಿದ್ದರಾಮಯ್ಯ, ಮೈಸೂರು ತಾಲ್ಲೂಕು ಬೋರ್ಡ್ ಅಖಾಡದಲ್ಲಿ ಒಂಟಿಯಾಗಿ ನಿಂತು ಭ್ರಷ್ಟಾಚಾರದ ಅಧಿಕಾರ ವ್ಯವಸ್ಥೆ ವಿರುದ್ಧ ಬಂಡೇಳುತ್ತಾರೆ.

1980ರಲ್ಲಿ ಮೊದಲ ಬಾರಿಗೆ ಚರಣ್ ಸಿಂಗ್ರ ಲೋಕದಳ ಪ್ರವೇಶಿಸಿದ ಸಿದ್ದರಾಮಯ್ಯ ಆ ಮೂಲಕ ಲೋಕಸಭೆಗೆ ಸ್ಪರ್ಧಿಸಿ ಸೋಲುಂಡರು. ಸೋಲೇ ಗೆಲುವಿನ ಮೆಟ್ಟಿಲು ಎಂದರಿತು, ರಾಜಕೀಯ ಬದುಕಿಗೆ ಮರು ಚಾಲನೆ ನೀಡಿದರು. ಆಗ ಹಿರಿಯ ಮುತ್ಸದ್ದಿ, ಸಚಿವರೂ ಆಗಿದ್ದ ಅಬ್ದುಲ್ ನಜೀರ್ ಸಾಬ್ ಅವರು, ಸಿದ್ದರಾಮಯ್ಯಗೆ ರಾಜಕೀಯ ಗಾಡ್ಫಾದರ್, ಆಪದ್ಭಾಂದವರು ಎಲ್ಲ.

**ಮೊದಲ ಬಾರಿಗೆ ವಿಧಾನಸಭೆ ಪ್ರವೇಶ**

1983ರ ಚುನಾವಣೆಯಲ್ಲಿ ಚಾಮುಂಡೇಶ್ವರಿ ಕ್ಷೇತ್ರದಿಂದ ಸ್ವತಂತ್ರವಾಗಿ ಗೆದ್ದು ವಿಧಾನಸಭೆ ಪ್ರವೇಶ ಮಾಡಿದ ಸಿದ್ದರಾಮಯ್ಯ, ನಂತರ ಜನತಾ ರಂಗ ಸೇ–ರಿದರು. ಅಂದರೆ, 1983ರಿಂದ 2005ರವರೆಗೆ ಜನತಾ ಪರಿವಾರದಲ್ಲಿದ್ದ ಅವರು, 1989, 1999ರಲ್ಲಿ 2 ಸಲ ಸೋತ ಸಮಯ 10 ವರ್ಷ ಕಳೆದರೆ ಇನ್ನು 12 ವರ್ಷ ಜನತಾ ಪರಿವಾರದಲ್ಲಿ ಅಧಿಕಾರದಲ್ಲಿದ್ದು ಉನ್ನತ ಸ್ಥಾನ ಪಡೆದರು.

ಮೊಟ್ಟ ಮೊದಲಿಗೆ ದೊರೆತಿದ್ದು ಕನ್ನಡ ಕಾವಲು ಸಮಿತಿ ಅಧ್ಯಕ್ಷ ಸ್ಥಾನ. ಅನಂತರ, ರೇಷ್ಮೆ ಖಾತೆ ಸಚಿವ ಸ್ಥಾನ. ಬಳಿಕ ಪಶುಸಂಗೋಪಣಾ ಖಾತೆ. ಎರಡು ಸಲ ಮಂತ್ರಿಯಾದರೂ ಯಾವ ಹಗರಣವು ಇಲ್ಲ. ಸಾಧನೆಯೂ ಇಲ್ಲ. ಆದರೆ, ಸಿದ್ದರಾಮಯ್ಯ ಗಮನಾರ್ಹ ರಾಜಕಾರಣಿ ಆಗಿದ್ದು 1987ರಲ್ಲಿ ಸಾರಿಗೆ ಮಂತ್ರಿಯಾದಾಗ.

1983ರಲ್ಲಿ ಜನತಾ ಪರಿವಾರ ಹೊಕ್ಕ ಹಿಂದುಳಿದ ವರ್ಗದ ಮುಖಂಡ, ಅಲ್ಲಿಂದೀಚೆಗೆ ಎಲ್ಲೂ ತಿರುಗಿ ನೋಡದೆ ರಾಜಕೀಯ ಪಡಸಾಲೆಯಲ್ಲಿ ಪ್ರಭಾವಿ ನಾಯಕನಾಗಿ ಬೆಳೆದುಬಂದ ಸಿದ್ದರಾಮಯ್ಯ ನಂತರ ಗಮನಸೆಳೆದಿದ್ದು ಮತ್ತೊಬ್ಬ ರೈತ ನಾಯಕ ಎಚ್.ಡಿ. ದೇವೇಗೌಡರ ಮನಸ್ಸನ್ನ.

**ದೈತ್ಯ ರಾಜಕೀಯ ಶಕ್ತಿಯ ಜೊತೆ ಪ್ರಬಲ ಶಕ್ತಿ**

ಈ ನಾಡಿನ ಜನರ ಬಾಯಲ್ಲಿ ಮಣ್ಣಿನ ಮಗ ಎನ್ನಿಸಿಕೊಂಡ ಏಕೈಕ ರೈತನಾಯಕ ನಮ್ಮ ದೇವೇಗೌಡರು. ಅಂಥಾ ದೈತ್ಯ ರಾಜಕೀಯ ಶಕ್ತಿಯ ಜೊತೆ ಮತ್ತೊಂದು ಪ್ರಬಲ ಶಕ್ತಿಯಾಗಿ ಬೆಳೆದ ನಾಯಕ ಸಿದ್ದರಾಮಯ್ಯ. ಅರಸು ನಂತರ ಹಿಂದುಳಿದ ವರ್ಗಗಳ ನಾಯಕ ಎಂತಲೇ ಬಿಂಬಿತವಾದ ಸಿದ್ದರಾಮಯ್ಯ ಜನತಾದಳ ಪಕ್ಷಕ್ಕೆ ದೊಡ್ಡ ಶಕ್ತಿಯಾಗಿದ್ದವರು.

1994ರಲ್ಲಿ ದೇವೇಗೌಡ್ರ ಸರ್ಕಾರದಲ್ಲಿ ಹಣಕಾಸು ಮತ್ತು ಯೋಜನಾ ಖಾತೆ ಸಚಿವ ಸ್ಥಾನ ಸಿಕ್ಕಿತು. ಜೆ.ಎಚ್.ಪಟೇಲ್ ಮತ್ತು ಕಾಂಗ್ರೆಸ್ಸಿನ ಧರ್ಮಸಿಂಗ್ ಆಡಳಿತದಲ್ಲಿ ಉಪಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಹಣಕಾಸು ಸಚಿವರಾಗಿ ಜನಪರ ಬಜೆಟ್ ಮಂಡಿಸಿ ರಾಜಕೀಯ ಧುರೀಣರ ಕೈಲಿ ಭೇಷ್ ಎನ್ನಿಸಿಕೊಂಡ ನಾಯಕ.

ಅದು ಹೆಗಡೆ– ದೇವೇಗೌಡರ ಜಗಳದ ಕಾಲ. ಆ ಸಂದರ್ಭದಲ್ಲಿ ಸಿದ್ದರಾಮಯ್ಯನನ್ನು ಸುದ್ದಿಗೆ ತಂದು ನಿಲ್ಲಿಸಿದವರು ಹಿರಿಯ ನಾಯಕ ಎಸ್.ಆರ್. ಬೊಮ್ಮಾಯಿ. ಸುದ್ದಿಗೋಷ್ಠಿಯೊಂದರಲ್ಲಿ ಕರ್ನಾಟಕದಲ್ಲಿ ಜನತಾದಳದ ಉಭಯ ಬಣಗಳು ಒಂದಾದರೆ, ಸಿದ್ದರಾಮಯ್ಯ ಏಕೀಕೃತ ಜನತಾದಳ ಅಧ್ಯರಾಗಬೇಕು; ಮುಂದೆ ಜನತಾದಳ ಗೆದ್ದರೆ ಅವರೇ ಸಿಎಂ ಆಗಬೇಕು ಹೇಳಿದ್ದೇ ಸುದ್ದಿಗೆ ಗ್ರಾಸವಾಗಿದ್ದು.

ಇನ್ನು ದೇವೇಗೌಡರು ಸಿಎಂ ಪಟ್ಟಕ್ಕೇರಿ ಕಡೆಗೆ ಪ್ರಧಾನಿ ಪಟ್ಟಗಿಟ್ಟಿಸಿಕೊಳ್ಳುವವರೆಗೂ ಬೆನ್ನಿಗೆ ನಿಂತು ಬೆಂಬಲವಾಗಿದ್ದ ಸಿದ್ದರಾಮಯ್ಯ ಕಡೆಗೆ ಗೌಡರಿಗೇ ಸೆಡ್ಡುಹೊಡೆದು ನಿಂತಿದ್ದು ರಾಜಕೀಯ ವಿಪರ್ಯಾಸವಷ್ಟೆ. ಜಾತ್ಯತೀತ ನೆಲೆಗಟ್ಟಿನಲ್ಲೇ ನಾಯಕನಾಗಿ ಬೆಳೆದುಬಂದ ಸಿದ್ದರಾಮಯ್ಯ ಕಡೆಗೆ ಅದೇ ಜಾತಿಯ ಆಧಾರದಲ್ಲಿ ತಮ್ಮ ನೆಲೆ ಕಂಡುಕೊಂಡಿದ್ದು ಅವರ ರಾಜಕೀಯ ಜಾಣತನಕ್ಕೆ ಹಿಡಿದ ಕೈಗನ್ನಡಿ.

**ಹೊಸ ಪಕ್ಷ ಕಟ್ಟಿದ್ದೂ ಉಂಟು...!!**

ಎಬಿಪಿಜೆಡಿ ಅನ್ನೋ ಪಕ್ಷ ಕಟ್ಟಿ ಅದರ ಜೊತೆಯಲ್ಲೇ ಅಲ್ಪಸಂಖ್ಯಾತ ಹಿಂದುಳಿದ ಮತ್ತು ದಲಿತ ಸಮೂಹವನ್ನ ಒಂದು ಮಾಡಿ ಅಹಿಂದ ಸಂಘಟನೆ ಕಟ್ಟಿದ ಸಿದ್ದರಾಮಯ್ಯ ಎಲ್ಲಾ ರಾಜಕೀಯ ಮುತ್ಸದ್ದಿಗಳ ರಾಜಕೀಯ ಲೆಕ್ಕಾಚಾರಗಳನ್ನೂ ಬುಡಮೇಲು ಮಾಡಿ ರಾಜ್ಯ ಕಾಂಗ್ರೆಸ್ ಪಕ್ಷವನ್ನ ತಮ್ಮ ಹಿಡಿತಕ್ಕೆ ತೆಗೆದುಕೊಂಡ ಚಾಣಾಕ್ಷ ರಾಜಕಾರಣಿ.

ಅದು 2006 ಡಿಸೆಂಬರ್ನಲ್ಲಿ ನಡೆದ ಉಪಚುನಾವಣೆ ಸಮರ. ಜೆಡಿಎಸ್ಗೆ ಸೆಡ್ಡು ಹೊಡೆದು ತಮ್ಮ ಶಾಸಕ ಸ್ಥಾನಕ್ಕೆ ರಾಜಿನಾಮೆ ನೀಡಿ ಸೋನಿಯಾ ನೇತೃತ್ವದಲ್ಲಿ ಕಾಂಗ್ರೆಸ್ ಸೇರಿದ ಸಿದ್ದರಾಮಯ್ಯರನ್ನ ಬಗ್ಗು ಬಡಿಯಲೇಬೇಕು ಅಂತ ದೇವೇಗೌಡರ ಆದೇಶವಾಗಿತ್ತು.



ಅದು ಎಚ್ಡಿ ಕುಮಾರಸ್ವಾಮಿ –ಯಡಿಯೂರಪ್ಪ ಜೋಡಿ 20–20 ಸರ್ಕಾರದ ಸಮಯ. ದೇವೇಗೌಡರ ಆದೇಶ ಅಂದಮೇಲೆ ಸುಮ್ಮನೇನಾ? ಸ್ವತಃ ಎಚ್.ಡಿ ಕುಮಾರಸ್ವಾಮಿ ಮತ್ತು ಯಡಿಯೂರಪ್ಪ ಸಿದ್ದರಾಮಯ್ಯ ಸ್ಪರ್ಧಿಸಿದ್ದ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಟಿಕಾಣಿ ಹೂಡಿದ್ರು. ನಡೆಯಬಾರದ ರಾಜಕೀಯ ತಂತ್ರಗಾ–ರಿಗಳು ನಡೆದುಹೋದ್ವು. ಆದ್ರೆ, ಅಲ್ಲೂ ಗೆದ್ದಿದ್ದು ಸಿದ್ದರಾಮಯ್ಯನವರ ಅಹಿಂದ ತಂತ್ರಗಾರಿಕೆ.

**ರೆಡ್ಡಿ ಬ್ರದರ್ಸ್ ಗೆ ಸೆಡ್ಡು ಹೊಡೆದು ತೊಡೆತಟ್ಟಿದ ನಾಯಕ**

ಗಣಿಧಣಿಗಳ ಆರ್ಭಟದಲ್ಲಿ ಭ್ರಷ್ಟಾಚಾರ ದೊಡ್ಡ ಸದ್ದುಗಳ ನಡುವೆ ವಿಧಾನಸಭೆಯ ಅಂಗಳದಲ್ಲಿ ರೆಡ್ಡಿ ಬ್ರದರ್ಸ್ ಗೆ ಸೆಡ್ಡು ಹೊಡೆದು ತೊಡೆತಟ್ಟಿನಿಂದ ನಾಯಕ ಸಿದ್ದರಾಮಯ್ಯ. ತಾಕತ್ತಿದ್ರೆ ಬಳ್ಳಾರಿಗೆ ಬನ್ನಿ ನಿಮ್ಮನ್ನ ಒಂದು ಕೈ ನೋಡ್ಕೊಳ್ತೀವಿ ಅನ್ನೋ ರೆಡ್ಡಿಧಣಿಗಳ ಸವಾಲನ್ನ ಸ್ವೀಕರಿಸಿದ ಸಿದ್ದರಾಮಯ್ಯ ನಂತರ ಪಾದಯಾತ್ರೆ ಹೊರಟಿದ್ದು ಬಳ್ಳಾರಿ ಕಡೆಗೆ.

ನಂತರ ನಡೆದದ್ದು ಅಕ್ಷರಶಃ ಸಿದ್ದರಾಮಯ್ಯನ ಪವಾಡ ಅಂತಲೇ ಹೇಳಬೇಕು. 2013ರಲ್ಲಿ ನಡೆದ ವಿಧಾನಸಭೆ ಚುನಾವಣೆ ಸಿದ್ದರಾಮಯ್ಯ ಪಾಲಿಗೆ ವರದಾನವಾಗಿ–ತ್ತು. ಸ್ಪಷ್ಟ ಬಹುಮತದೊಂದಿಗೆ ಅಧಿಕಾರದ ಗದ್ದುಗೆ ಏರಿದ ಸಿದ್ದರಾಮಯ್ಯ ಈಗ ಭಾಗ್ಯಗಳ ಸರದಾರನಾಗಿ ಬೆಳೆದುನಿಂತಿರುವ ಈ ನಾಡುಕಂಡ+ ಯಶಸ್ವಿ ಮುಖ್ಯಮಂತ್ರಿ. ಇನ್ನು ಅದು ದೇಶದ ಯಾವ ಜನಪ್ರತಿನಿಧಿಯೂ ಈವರೆಗೆ ದಾಖಲಿಸಲಾಗದ ಮಹಾದಾಖಲೆ.

ರಾಜ್ಯದ ಆರ್ಥಿಕ ಸ್ಥಿತಿಗತಿಗಳನ್ನ ಕರಾರುವಕ್ಕಾಗಿ ಲೆಕ್ಕಾಚಾರ ಮಾಡಿ, ಬಡಜನರ ಮತ್ತು ರೈತಪರ ಬಜೆಟ್ಗಳನ್ನ ಬರೋಬ್ಬರಿ ಮಂಡಿಸಿದ ಹೆಗ್ಗಳಿಕೆ ಸಿದ್ದರಾಮಯ್ಯನವರದ್ದು. ಅದರ ಜೊತೆಯಲ್ಲೇ ಸಿಎಂ ಆದ ನಾಲ್ಕು ವರ್ಷಗಳಲ್ಲಿ ಮಾಡಿದ ಸಾಧನೆ ಇಡೀ ದೇಶವೇ ಕರ್ನಾಟಕದತ್ತ ನೋಡುವಂತೆ ಮಾಡಿದೆ. ಅದು ಸಣ್ಣ ಮಾತಲ್ಲ.

**ಬರೋಬ್ಬರಿ 12 ಬಾರಿ ಬಜೆಟ್ ಮಂಡನೆ– ದಾಖಲೆ ನಾಯಕ**

ಬರೋಬ್ಬರಿ 12 ಬಾರಿ ಒಂದು ರಾಜ್ಯದ ಬಜೆಟ್ ಮಂಡನೆ ಮಾಡೋದು ಅಂದ್ರೆ ಸಾಧಾರಣ ವಿಚಾರವಲ್ಲ. ಸಿದ್ದರಾಮಯ್ಯನವರ ಪಾಲಿಗೆ ಅದೊಂದು ಹೊಸ ದಾಖಲೆ. ಮಂಡನೆ ಮಾತ್ರವಲ್ಲ ಮಂಡಿಸಿದ ಬಜೆಟ್ಗಳೆಲ್ಲಾ ಯಶಸ್ವಿ ಮತ್ತು ಜನಪರ ಬಜೆಟ್ಗಳು ಅನ್ನೋ ಹೆಗ್ಗಳಿಕೆ ಪಡೆದ ಆರ್ಥಿಕ ತಜ್ಞ ಸಿದ್ದರಾಮಯ್ಯ.

ಚುನಾವಣೆ ವೇಳೆ ಜನರಿಗೆ ಭರವಸೆ ನೀಡೋದು ಸುಲಭದ ಕೆಲಸ ಆದ್ರೆ ಆ ಭರವಸೆಯನ್ನ ನಂಬಿ ಸರ್ಕಾರವನ್ನ ಆಯ್ಕೆ ಮಾಡಿದ ಜನರ ನಂಬಿಕೆಯನ್ನ ಈಡೇರಿಸೋದು ಆಯ್ಕೆಯಾದ ಸರ್ಕಾರದ ಬಹುದೊಡ್ಡ ಸವಾಲು. ಆ ಹಾದಿಯಲ್ಲಿ ಸಿದ್ದು ಸರ್ಕಾರ ಶೇಕಡ 80ರಷ್ಟು ಸಾಧಿಸಿ ತೋರಿಸಿದೆ ಅನ್ನೋದು ರಾಜಕೀಯ ಧುರೀಣರ ಲೆಕ್ಕಾಚಾರ. ಅದರಲ್ಲೂ ಸಿದ್ದು ಸರ್ಕಾರ ಕೈಗೊಂಡ ಸರಣಿ ಭಾಗ್ಯಗಳ ಯೋಜನೆ ಬಹುಪಾಲು ಜನರ ಮನಗೆದ್ದಿರುವುದರಲ್ಲಿ ಎರಡು ಮಾತಿಲ್ಲ.



ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಕೇವಲ 45 ನಿಮಿಷಗಳಲ್ಲಿ ಘೋಷಣೆ ಮಾಡಿದ ಮಹತ್ವದ ಯೋಜನೆಯೇ ಅನ್ನಭಾಗ್ಯ. ಇದು ಸಿದ್ದರಾಮಯ್ಯನವರ ಕನಸಿನ ಯೋಜನೆಯಷ್ಟೇ ಅಲ್ಲಾ ಕಾಂಗ್ರೆಸ್ ಪ್ರಣಾಳಿಕೆಯ ಮೊದಲ ಯೋಜನೆ ಕೂಡ ಹೌದು.

ಬಿಪಿಎಲ್ ಕಾರ್ಡ್ ಹೊಂದಿರುವ ರಾಜ್ಯದ ಒಟ್ಟು 4 ಕೋಟಿ ಫಲಾನುಭವಿಗಳಿಗೆ 1ರೂಗೆ 1ಕೆಜಿ ಅಕ್ಕಿ ಉಚಿತ ಮತ್ತು ರಿಯಾಹಿತಿ ದರದಲ್ಲಿ ಉಪ್ಪು ಮತ್ತು ತಾಳೆ ಎಣ್ಣೆ ನೀಡುವ ಯೋಜನೆ ಅತ್ಯಂತ ಯಶಸ್ವಿಯಾಗಿ ಜಾರಿಯಾಗಿದೆ. ಇದು ರಾಜ್ಯದ ಬಡಜನರ ಹಸಿವು ನೀಗಿಸೋ ಮಹತ್ವದ ಯೋಜನೆ ಎನಿಸಿಕೊಂಡಿದೆ.

ಇದು ಸಿಎಂ ಸಿದ್ದರಾಮಯ್ಯನವರ ಸಾಧನೆಯ ಹಾದಿಯ ಹೈಲೈಟ್ಸ್ಗಳು. ಇದರ ಜೊತೆಯಲ್ಲೇ ಕಾಂಗ್ರೆಸ್ ಪಕ್ಷಕ್ಕೆ ವಲಸೆ ಬಂದು ಇಡೀ ಪಕ್ಷವನ್ನ ತನ್ನ ಹಿಡಿತಕ್ಕೆ ತೆಗೆದುಕೊಂಡವರು ಸಿದ್ದರಾಮಯ್ಯ. ಮೂಲ ಕಾಂಗ್ರೆಸ್ಸಿಗರನ್ನ ಓವರ್ಟೇಕ್ ಮಾಡಿ ಪಕ್ಷದ ಅಧಿಪತ್ಯಸಾಧಿಸಿದ ಚಾಣಕ್ಯ ನಾಯಕ.

**ವಿರೋಧಿಸಿದ ಪಕ್ಷದಿಂದಲೇ ಮುಖ್ಯಮಂತ್ರಿಗಾದಿ**

ಅದು ಕಾಂಗ್ರೆಸ್ ಪಕ್ಷಕ್ಕೂ ಅನಿವಾರ್ಯ ಅನ್ನೋ ಕಾಲ. ಕಾಂಗ್ರೆಸ್ ಪಕ್ಷವನ್ನ ಮಣ್ಣು ಮುಕ್ಕಿಸಿ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಸಮ್ಮಿಶ್ರ ಸರ್ಕಾರ ರಚಿಸಿದ ಮೇಲೆ ಕರ್ನಾಟಕದಲ್ಲಿ ಕಾಂಗ್ರೆಸ್ ಅವಸಾನದ ಹಾದಿಯಲ್ಲಿದೆ ಅನ್ನೋದು ಆ ಪಕ್ಷದ ಹೈಕಮಾಂಡ್ಗೆ ಅರಿವಾಗಿತ್ತು. ಆಗ ಕಾಂಗ್ರೆಸ್ ಪಾಲಿಗೆ ವರದಾನವಾಗಿದ್ದೇ ಸಿದ್ದರಾಮಯ್ಯ. ಸಿದ್ದರಾಮಯ್ಯಗೂ ಅದೇ ಬೇಕಿತ್ತು ದೇವೇಗೌಡರು ತಪ್ಪಿಸಿದ ಸಿಎಂ ಗದ್ದುಗೆಯನ್ನ ಅವರ ಎದುರೇ ಏರಲು ಕಾಂಗ್ರೆಸ್ನಂತಹ ದೊಡ್ಡ ಪಕ್ಷದ ಅನಿವಾರ್ಯತೆ ಇತ್ತು. ಆಗಲೇ ಸಿದ್ದರಾಮಯ್ಯ ಕೈಗೆ ಜೈ ಎಂದಿದ್ದು.

ಸಿದ್ದರಾಮಯ್ಯ ತಾವೊಬ್ಬರೇ ಕಾಂಗ್ರೆಸ್ ಸೇರಲಿಲ್ಲ. ಜೊತೆಗೆ ಜೆಡಿಎಸ್ನ ಪ್ರಬಲ ಶಾಸಕರ ಗುಂಪನ್ನೂ ಜೊತೆ ಮಾಡಿಕೊಂಡೇ 2013ರ ಚುನಾವಣೆಯಲ್ಲಿ ಭರ್ಜರಿ ಜಯಭೇರಿ ಬಾರಿಸಿದ್ರು.

ಯಾವಾಗ ಸಿದ್ದರಾಮಯ್ಯ ನೇತೃತ್ವದಲ್ಲಿ ಹೊಸ ಸರ್ಕಾರ ರಚನೆಯಾಯ್ತೋ ಅಲ್ಲಿಂದ ಶುರುವಾಯ್ತು ನೋಡಿ ಮೂಲ ಕಾಂಗ್ರೆಸ್ಸಿಗರ ಪರದಾಟ. ಎಷ್ಟೋ ವರ್ಷಗಳಿಂದ ಪಕ್ಷಕ್ಕಾಗಿ ಮಣ್ಣು ಹೊತ್ತ ಘಟಾನುಘಟಿ ನಾಯಕರೆಲ್ಲಾ ಸಿದ್ದರಾಮಯ್ಯರ ಮುಂದೆ ಮಂಕಾಗಿಹೋದ್ರು.

ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಾಗ ಪಕ್ಷದ ಅಧ್ಯಕ್ಷರಾಗಿದ್ದವರು ಡಾ. ಪರಮೇಶ್ವರ್. ಸಿಎಂ ಕನಸು ಹೊತ್ತಿದ್ದ ಪರಮೇಶ್ವರ್ ಚುನಾವಣೆಯಲ್ಲಿ ಕಂಡ ಸೋಲಿನಿಂದ ಸಿಎಂ ರೇಸಿನಿಂದ ದೂರ ಉಳಿಯುವಂತಾಯ್ತು. ಅವರ ಸೋಲಿಗೆ ಸಿದ್ದರಾಮಯ್ಯನವರ ತಂತ್ರಗಾರಿಕೆಯೂ ಕಾರಣ ಅನ್ನೋ ಮಾತು ಕೂಡ ನಂತರ ಕೇಳಿಬಂತು.

**ಎದುರಾಳಿಗಳಿಗೆ ಎಡೆಮುರಿ ಕಟ್ಟಿದ ಚಾಣಕ್ಯ**

ಆದ್ರೆ, ಕಡೇ ಪಕ್ಷ ಉಪಮುಖ್ಯಮಂತ್ರಿಯಾದ್ರೂ ಆಗಲೇಬೇಕು ಅಂತ ಹಠಕ್ಕೆ ಬಿದ್ದ ಪರಮೇಶ್ವರ್ ದಲಿತ ಸಿಎಂ ಅನ್ನೋ ವಾದವನ್ನ ಮುನ್ನೆಲೆಗೆ ತಂದು ಪಟ್ಟು ಹಾಕಿದ್ರು. ಆದ್ರೆ, ಅವರ ಪಟ್ಟು ಸಿದ್ದರಾಮಯ್ಯರ ಅಖಾಡದಲ್ಲಿ ಠುಸ್ಆಗಿಹೋಯ್ತು. ಕಡೆಗೆ ದಕ್ಕಿದ್ದು ಹೋಂ ಮಿನಿಸ್ಟರ್ ಪಟ್ಟ ಮಾತ್ರ. ಈಗ ಅದೂ ಇಲ್ಲ ಬಿಡಿ. ಆದ್ರೆ, ಇಲ್ಲಿ ಮೆಚ್ಚಬೇಕಾದ್ದು ಮಾತ್ರ ಸಿದ್ದು ತಂತ್ರಕಾರಿಕೆಯನ್ನ ಕಾಂಗ್ರೆಸ್ನಲ್ಲಿ ಹೈಕಮಾಂಡ್ಗೆ ಹತ್ತಿರವಾದ ನಾಯಕರಲ್ಲಿ ಮುಂಚೂಣಿಯಲ್ಲಿ ನಿಲ್ಲೋ ನಾಯಕ ಡಿಕೆ ಶಿವಕುಮಾರ್.

ಆದ್ರೆ, ವಿಪರ್ಯಾಸ ಅಂದ್ರೆ ಮೊದಲ ಸಂಪುಟ ರಚನೆ ಸಮಯದಲ್ಲಿ ಎಷ್ಟೇ ಪ್ರಭಾವಗಳು ಕೆಲಸ ಮಾಡಿದ್ರೂ ಡಿಕೆ ಮಾತ್ರ ಸಂಪುಟಕ್ಕೆ ಎಂಟ್ರಿಯಾಗಲಿಲ್ಲ. ಆ ಮಟ್ಟಿಗೆ ಡಿಕೆಯನ್ನ ಕ್ಯಾಬಿನೆಟ್ನಿಂದ ದೂರವಿಟ್ಟು ಹೈಕಮಾಂಡ್ ಜೊತೆ ಸಂಬಂಧವನ್ನ ಗಟ್ಟಿಗೊಳಿಸಿಕೊಂಡ ನಾಯಕ ಸಿದ್ದರಾಮಯ್ಯ ಮಂಡ್ಯ ಲೋಕಸಭಾ ಉಪಚುನಾವಣೆ ಇರಬಹುದು, ನಂಜನಗೂಡು–ಗುಂಡ್ಲುಪೇಟೆ ಉಪಚುನಾವಣೆ ಇರಬಹುದು ಕಾಂಗ್ರೆಸ್ ಪಕ್ಷದ ಜಯಭೇರಿಗೆ ಕಾರಣವಾದ ಸಿದ್ದರಾಮಯ್ಯನ ಪವಾಡ ಹೈಕಮಾಂಡ್ ಮಟ್ಟದಲ್ಲಿ ಅವರನ್ನ ಮತ್ತಷ್ಟು ಬಲಗೊಳಿಸಿದ್ದು ಸುಳ್ಳಲ್ಲ. ಶ್ರೀನಿವಾಸಪ್ರಸಾದ್ರಂತಹ ಪ್ರಬಲ ದಲಿತ ನಾಯಕನನ್ನೂ ಮೂಲೆಗುಂಪು ಮಾಡಿ ಜಯಿಸಿಕೊಂಡ ಜಾಣ್ಮೆ ಸಿದ್ದರಾಮಯ್ಯನವರದ್ದು.

**ಸವಾಲುಗಳ ಎದುರಿಸಿದ ದಕ್ಷ ರಾಜಕಾರಣಿ**

ಐಎಎಸ್ ಅಧಿಕಾರಿ ಡಿ.ಕೆ. ರವಿ ಸಾವಿನ ಪ್ರಕರಣ ಇರಬಹುದು, ಲೋಕಾಯುಕ್ತ ಬದಲು ಎಸಿಬಿ ಸ್ಥಾಪನೆ ವಿವಾದ ಇರಬಹುದು, ಮಹದಾಯಿ–ಕಾವೇರಿ ನೀರು ಹಂಚಿಕೆ ಹೋರಾಟಗಳಿರಬಹುದು. ಬೆಳಗಾವಿಯಲ್ಲಿನ ರೈತನ ಆತ್ಮಹತ್ಯೆ ಇರಬಹುದು ಎಲ್ಲಾ ವಿವಾದಗಳನ್ನೂ ದಾಟಿಬಂದ ಸಿದ್ದರಾಮಯ್ಯ ಮಗನ ಸಾವಿನ ನೋವಲ್ಲೂ ಎದೆಗುಂದದೆ ಉತ್ತಮ ಆಡಳಿತ ನೀಡುವತ್ತ ಹೆಜ್ಜೆ ಇಟ್ಟವರು.

ಸಿದ್ದರಾಮಯ್ಯ ಸರ್ಕಾರವನ್ನ ಉರುಳಿಸೋಕೆ ಪ್ರತಿಪಕ್ಷಗಳು ಏನೇ ತಂತ್ರಗಾರಿಕೆ ನಡೆಸಿದ್ರೂ ಸಿದ್ದು ತಂತ್ರಕ್ಕೆ ಅವೆಲ್ಲಾ ಠುಸ್ ಪಟಾಕಿಯಂತಾಗಿವೆ. ಡಿ.ಕೆ. ರವಿ ಸಾವಿನ ಪ್ರಕರಣದಿಂದಿಡಿದು ಬೈಕ್ ರ್ಯಾಲಿವರೆಗೂ ಬಿಜೆಪಿ ಪಕ್ಷ ನಡೆಸಿದ ಯಾವ ಹೋರಾಟಗಳು ಸಿದ್ದರಾಮಯ್ಯರ ಕುರ್ಚಿ ಕದಲಿಸಲಿಲ್ಲ. ಆ ಮಟ್ಟಿಗೆ ಸಿದ್ದರಾಮಯ್ಯ ವಿಪಕ್ಷಗಳ ಸೊಂಟ ಮುರಿದಿದ್ದು ದಾಖಲೆಯೇ ಸರಿ.

2018ರಲ್ಲಿ ಚುನಾವಣೆಯಲ್ಲಿ ಕಾಂಗ್ರೆಸ್ ಸೋಲು ಕಂಡಿತು. ಮತ್ತೊಮ್ಮೆ ಅವರು ಸಿಎಂ ಆಗುವ ಕನಸು ಈಡೇರಲಿಲ್ಲ. ಆದರೆ, ವಿರೋಧ ಪಕ್ಷದ ನಾಯಕರಾಗಿ ಆಡಳಿತರೂಢ ಸರ್ಕಾರದ ವಿರುದ್ಧ ಗಟ್ಟಿಯಾಗಿ ಧ್ವನಿ ಎತ್ತಿದ ನಾಯಕ ಅಂತಲೇ ಕರೆಯಬಹುದು. ಕೆಲವೊಂದು ಪ್ರಕರಣಗಳ, ಹಗರಣಗಳನ್ನ ಬೆಳಕಿಗೆ ತಂದು ಬಿಜೆಪಿ ಸರ್ಕಾರವನ್ನು ಇಕ್ಕಟ್ಟಿಗೆ ತಂದಿದ್ದು ಉಂಟು. ಏನೇ ಹೇಳಿ ಸಿದ್ದರಾಮಯ್ಯ ಅದ್ರೆ ಖಡಕ್ ಮಾತು. ನೇರ ನಿಷ್ಠುರ, ರಾಜಕಾರಣಿ. ಇಂದಿಗೂ ಹಿಂದುಳಿದ ವರ್ಗಗಳ ಅಗ್ರ ನಾಯಕರಾಗಿ ತಮ್ಮ ವರ್ಚಸ್ಸನ್ನು ಉಳಿಸಿದ್ದಾರೆ ಎನ್ನಬಹುದು.

# ಉಚಿತ ವಿದ್ಯುತ್ ಯೋಜನೆ ಮಾಹಿತಿ ಗೊತ್ತೇ?

ಬೆಂಗಳೂರು, ಮೇ. 18: ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಭರ್ಜರಿ ಜಯ ಗಳಿಸಿರುವ ಕಾಂಗ್ರೆಸ್‌ಗೆ ಅವರು ಘೋಷಿಸಿದ್ದ ಐದು ಗ್ಯಾರಂಟಿಗಳು ಸಾಥ್ ನೀಡಿವೆ ಎನ್ನಲಾಗಿದೆ. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕೂಡ ಈ ಐದುವ ಭರವಸೆಗಳು ಜನರಿಗೆ ಕಾಂಗ್ರೆಸ್ ಮೇಲೆ ನಂಬಿಕೆ ಹುಟ್ಟಿಸಿ ಜನರು ಪಕ್ಷಕ್ಕೆ ಮತ ಚಲಾಯಿಸಿದ್ದಾರೆ ಎಂದಿದ್ದಾರೆ.

ಕಾಂಗ್ರೆಸ್ ಪಕ್ಷವು ಘೋಷಿಸಿದ ಐದು 'ಗ್ಯಾರೆಂಟಿ'ಗಳು ಪಕ್ಷದ ಪರವಾಗಿ ಕೆಲಸ ಮಾಡಿವೆ ಮತ್ತುಇತ್ತೀಚೆಗೆ ಮುಗಿದ ಕರ್ನಾಟಕ ವಿಧಾನಸಭೆ ಚುನಾವಣೆಯಲ್ಲಿ 135 ಸ್ಥಾನಗಳನ್ನು ಪಡೆಯಲು ಸಹಾಯ ಮಾಡಿದೆ. ಹೀಗಾಗಿಯೇ ಮೊದಲ ಸಂಪುಟ ಸಭೆಯಲ್ಲಿಯೇ ಎಲ್ಲ ಐದು ಗ್ಯಾರೆಂಟಿಗಳನ್ನು ಜಾರಿಗೊಳಿಸಲಾಗುವುದು ಎಂದು ಕಾಂಗ್ರೆಸ್ ನಾಯಕರು ಭರವಸೆ ನೀಡಿದ್ದಾರೆ.

ಈ ವರ್ಷದ ಜನವರಿಯಲ್ಲಿ ಪಕ್ಷವು ಘೋಷಿಸಿದ ಮೊದಲ ಭರವಸೆಗಳಲ್ಲಿ ಒಂದಾದ 'ಗೃಹ ಜ್ಯೋತಿ' ಯೋಜನೆಯ ಅಡಿಯಲ್ಲಿ ಪ್ರತಿ ಮನೆಗೆ ತಿಂಗಳಿಗೆ 200 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್ ನೀಡಲಾಗುತ್ತದೆ. ಈಗಾಗಲೇ ಜನ ಕಾಂಗ್ರೆಸ್ ಜಯಗಳಿಸಿದ್ದು ವಿದ್ಯುತ್ ಬಿಲ್ ಕಟ್ಟುವುದಿಲ್ಲ ಎಂದು ಹಠ ಹಿಡಿದಿದ್ದಾರೆ. ಆಗಾದರೆ, ಈ ಗೃಹಜ್ಯೋತಿ ಯೋಜನೆ ಬಗ್ಗೆ ನೀವು ತಿಳಿದುಕೊಳ್ಳಬೇಕಾದದ್ದು ಇಲ್ಲಿದೆ.

ಜನವರಿಯಲ್ಲಿ ಕಾಂಗ್ರೆಸ್ ಮೊದಲ ಸುತ್ತಿನ 'ಪ್ರಜಾಧ್ವನಿ ಯಾತ್ರೆ' ಆರಂಭಿಸಿದಾಗ, ಪಕ್ಷವು ಪ್ರತಿ ಮನೆಗೆ ತಿಂಗಳಿಗೆ 200



ಯೂನಿಟ್‌ಗಳವರೆಗೆ ಉಚಿತ ವಿದ್ಯುತ್ ನೀಡುವ ಮೊದಲ 'ಗ್ಯಾರೆಂಟಿ' ಘೋಷಿಸಿತು. 'ನಮ್ಮ ಮೊದಲ ಗ್ಯಾರೆಂಟಿಯಾಗಿ ನಾವು ಗೃಹ ಜ್ಯೋತಿ ಯೋಜನೆಯಿಂದ ಪ್ರತಿ ಮನೆಯನ್ನು ಬೆಳಕಿನಿಂದ ಬೆಳಗಿಸಲು ಬಯಸುತ್ತೇವೆ' ಎಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿಕೆ ಶಿವಕುಮಾರ್ ಬೆಳಗಾವಿಯಲ್ಲಿ ಹೇಳಿದ್ದರು.

"ಬೆಲೆಯೇರಿಕೆಯಿಂದ ತತ್ತರಿಸಿರುವ ರಾಜ್ಯದ ಜನರಿಗೆ ನೆಮ್ಮದಿ ನೀಡುವ ಯೋಜನೆಯನ್ನು ನಾವು ಘೋಷಿಸುತ್ತಿದ್ದೇವೆ. ರಾಜ್ಯದ ಪ್ರತಿ ಮನೆಗೂ 200 ಯುನಿಟ್ ಉಚಿತ ವಿದ್ಯುತ್ ಒದಗಿಸುವ 'ಗೃಹಜ್ಯೋತಿ' ಯೋಜನೆಯನ್ನು ಕಾಂಗ್ರೆಸ್ ಸರ್ಕಾರ ಜಾರಿಗೊಳಿಸಲಿದೆ. ನಿಮ್ಮ ವಿದ್ಯುತ್ ಬಿಲ್ ಇನ್ಮುಂದೆ ಕಾಂಗ್ರೆಸ್ ಜವಾಬ್ದಾರಿ" ಎಂದು ಕಾಂಗ್ರೆಸ್ ತಿಳಿಸಿತ್ತು.

ಪ್ರತಿ ತಿಂಗಳಿಗೆ 22 ಯೂನಿಟ್‌ಗಳ ಉಚಿತ ವಿದ್ಯುತ್ ದಲಿತರು, ಒಬಿಸಿಗಳು ಮತ್ತು ಅಲ್ಪಸಂಖ್ಯಾತರಿಗೆ ಸೀಮಿತವಾಗಿರದೆ ಎಲ್ಲರಿಗೂ ಯಾವುದೇ ಅಡೆತಡೆಯಿಲ್ಲಎ ನೀಡಲಾಗುತ್ತದೆ. ಯಾವುದೇ ಬೆಲೆ ತೆತ್ತಾದರೂ ನಾವು ನೀಡಿದ ಗ್ಯಾರೆಂಟಿಗಳನ್ನು ಈಡೇ–ರಿಸುತ್ತೇವೆ" ಎಂದು ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ ಹೇಳಿದ್ದರು.

ಆದರೆ 200ಕ್ಕಿಂತ ಕಡಿಮೆ ಬಳಸಿದವರಿಗೆ ಮಾತ್ರ ಉಚಿತ ಭರವಸೆ ಅನ್ವಯವಾಗುತ್ತದೆಯೇ ಎಂಬುದಕ್ಕೆ ಇನ್ನು ಸ್ಪಷ್ಟ ಉತ್ತರ ದೊರೆತಿಲ್ಲ. ಪಕ್ಷ ಈ ಬಗ್ಗೆ ಇನ್ನೂ ಹಲವು ಮಾಹಿತಿಗಳನ್ನು ಜಾರಿಗೊಳಿಸಬೇಕಾಗಿದೆ. ಮೊದಲ ಸಂಪುಟ ಸಭೆಯ ಬಳಿಕ ಈ ಎಲ್ಲಾ ಗೊಂದಲಗಳಿಗೂ ತೆರೆ ಬೀಳುವ ಸಾಧ್ಯತೆಯಿದೆ.

ರಾಷ್ಟ್ರ ರಾಜಧಾನಿ ದೆಹಲಿಯಲ್ಲಿಯೂ ಅರವಿಂದ್ ಕೇಜ್ರಿವಾಲ್ ಸರ್ಕಾರವು ಪ್ರತಿ ಮನೆಗೆ 200 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್ ಮತ್ತು 201 ರಿಂದ 400 ಯೂನಿಟ್‌ಗಳಿಗೆ 50 ಪ್ರತಿಶತ ಸಬ್ಸಿಡಿ ನೀಡಿದೆ. ಆದರೆ ಕಳೆದ ವರ್ಷ ಅರ್ಜಿ ಸಲ್ಲಿಸುವವ–ರಿಗೆ ಮಾತ್ರ ಸಬ್ಸಿಡಿ ಸಿಗುತ್ತದೆ ಎಂದು ಘೋಷಿಸಿದ್ದಾರೆ. ವರದಿಗಳ ಪ್ರಕಾರ, ದೆಹಲಿ ಸರ್ಕಾರವು ಈ ವರ್ಷ ವಿದ್ಯುತ್ ಸಬ್ಸಿಡಿಗಾಗಿ 3,250 ಕೋಟಿಗಳನ್ನು ಮೀಸಲಿಟ್ಟಿದೆ. 58 ಲಕ್ಷ ಗ್ರಾಹಕರಲ್ಲಿ 46 ಲಕ್ಷ ಕುಟುಂಬಗಳು ಸಬ್ಸಿಡಿಗಾಗಿ ಅರ್ಜಿ ಹಾಕಿವೆ.

ಕರ್ನಾಟಕದಲ್ಲಿ, ಬೆಸ್ಕಾಂ, ಮೆಸ್ಕಾಂ, ಹೆಸ್ಕಾಂ, ಗೆಸ್ಕಾಂ ಮತ್ತು ಸೆಸ್ಕಾಂ ಎಂಬ ಐದು ವಿದ್ಯುತ್ ಸರಬರಾಜು ಕಂಪನಿಗಳಿವೆ. ಇವು ವಿವಿಧ ಪ್ರದೇಶಗಳಿಗೆ ವಿದ್ಯುತ್ ಒದಗಿಸುತ್ತವೆ. ವಿದ್ಯುತ್ ದರವನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಕೆಇಆ–ರ್ಸಿ) ನಿಯಂತ್ರಿಸುತ್ತದೆ. ಪ್ರದೇಶದಿಂದ ಪ್ರದೇಶಕ್ಕೆ ದರಗಳು ಬದಲಾಗುತ್ತವೆ. ಬೆಂಗಳೂರಿನಲ್ಲಿ, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ (ಬೆಸ್ಕಾಂ) ಶುಲ್ಕಗಳು ಬಳಕೆಗೆ ಅನುಗುಣವಾಗಿ ಬದಲಾಗುತ್ತವೆ.

# ಬೆಂಗಳೂರಿಗೆ ಆಗಮಿಸಿದ ನಿಯೋಜಿತ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್; ಕಾಂಗ್ರೆಸ್ ಕಾರ್ಯಕರ್ತರಿಂದ ಅದ್ಧೂರಿ ಸ್ವಾಗತ

ಬೆಂಗಳೂರು: ನೂತನ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿರುವ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿಯಾಗಿ ಆಯ್ಕೆಯಾಗಿರುವ ಡಿ.ಕೆ.ಶಿವಕುಮಾರ್ ರಾಜಧಾನಿ ಬೆಂಗಳೂರಿಗೆ ಆಗಮಿಸಿದ್ದು, ಕಾಂಗ್ರೆಸ್ ಕಾರ್ಯಕರ್ತರು, ನೂತನ ಶಾಸಕರು ಆತ್ಮೀಯವಾಗಿ ಸ್ವಾಗತಿಸಿದ್ದಾರೆ.

ದೆಹಲಿಯಿಂದ ಬೆಂಗಳೂರಿಗೆ ವಿಶೇಷ ವಿಮಾನದ ಮೂಲಕ ಜೊತೆಯಾಗಿ ಆಗಮಿಸಿರುವ ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಬೆಂಗಳೂರಿನ ಹೆಚ್ ಎ ಎಲ್ ವಿಮಾನ ನಿಲ್ದಾಣಕ್ಕೆ ಬಂದಿಳಿದಿದ್ದು,



ಕಾಂಗ್ರೆಸ್ ನ ನೂತನ ಶಾಸಕರು ಹೂಗುಚ್ಛ ನೀಡಿ ಇಬ್ಬರು ನಾಯಕರನ್ನು ಬರಮಾಡಿಕೊಂಡಿದ್ದಾರೆ.

ಇದೇ ವೇಳೆ ಕಾಂಗ್ರೆಸ್ ಕಾರ್ಯಕರ್ತರು ಪಟಾಕಿ ಸಿಡಿಸಿ, ಜಯಕಾರ ಕೂಗಿ ಸಂಭ್ರಮಿಸಿದ್ದಾರೆ. ಇನ್ನು ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿ ಆಯ್ಕೆಯಾಗಿರುವ ಸಿದ್ದರಾಮಯ್ಯ ಮೊದಲಬಾರಿ ಡಿಸಿಎಂ ಆಗಿ ಆಯ್ಕೆಯಾಗಿರುವ ಡಿ.ಕೆ.ಶಿವಕುಮಾರ್ ಇಬ್ಬರು ನಾಯಕರ ಕಾರಿನ ಮೇಲೆ ಪುಷ್ಪವೃಷ್ಟಿಗರೆದು ಸ್ವಾಗತಿಸಿದರು.

ವಿವಿಧ ಕಲಾತಂಡಗಳು ಗೊಂಬೆ ಕುಣಿತ, ಕಂಸಾಳೆ, ಡೊಳ್ಳು ಕುಣಿತದ ಮೂಲಕ ಸ್ವಾಗತಿಸಿದ್ದು ವಿಶೇಷವಾಗಿತ್ತು. ಈ ವೇಳೆ ಇಬ್ಬರು ನಾಯಕರು ನೆರೆದಿದ್ದ ಕಾರ್ಯಕರ್ಯರು, ಜನರತ್ತ ಕೈಬೀಸಿ ಸಾಗಿದರು.

# ಲಕ್ಷ್ಮೀ ಹೆಬ್ಬಾಳಕರ ಲಕ್ಕಿ: ಮಂತ್ರಿಯಾಗೋದು ನಕ್ಕೀ

ಬೆಳಗಾವಿ: ರಾಜ್ಯದಲ್ಲಿ ದೊಡ್ಡ ಜಿಲ್ಲೆಯಾಗಿರೋ ಬೆಳಗಾವಿಯ ಇಷ್ಟು ವರ್ಷಗಳ ಕಾಲ ಬಿಜೆಪಿಯ ಭದ್ರಕೋಟೆಯಾಗಿತ್ತು. ಆದರೇ ಈ ಸಲದ ಚುನಾವಣೆಯಲ್ಲಿ ಜಿಲ್ಲೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ದೊಡ್ಡ ಯಶಸ್ಸು ಸಿಕ್ಕಿದೆ. ಜಿಲ್ಲೆಯಲ್ಲಿ 11 ಜನ ಕಾಂಗ್ರೆಸ್ ಶಾಸಕರು ಆಯ್ಕೆಯಾಗಿದ್ದು, ಪಕ್ಷ ಸಂಘಟನೆಗಾಗಿ ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ ಜಾರಕಿಹೊಳಿ ಶ್ರಮ ವಹಿಸಿದ್ದಾರೆ. ಹೆಲಿಕಾಪ್ಟರ್ ನಲ್ಲಿ ಇಡೀ ರಾಜ್ಯವನ್ನು ಸುತ್ತಿ ಪಕ್ಷ ಸಂಘಟನೆಗೆ ಆದ್ಯತೆ ನೀಡಿದ್ದಾರೆ. ಕಳೆದ ಮೂರು ವರ್ಷಗಳಿಂದ ಸತೀಶ ಜಾರಕಿಹೊಳಿ ಕೆಪಿಸಿಸಿ ಕಾರ್ಯಾಧ್ಯಕ್ಷರಾ ಬಳಿಕ ಇಡೀ ರಾಜ್ಯದಲ್ಲಿ ಪಕ್ಷ ಸಂಘಟನೆ ಮಾಡಿದ್ದಾರೆ. ಇನ್ನೂ ಅನೇಕ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳ ಗೆಲುವಿನಲ್ಲಿ ಸತೀಶ ಜಾರಕಿಹೊಳಿ ಪ್ರಮುಖ ಪಾತ್ರ ವಹಿಸಿದ್ದಾರೆ. ಸಿದ್ದರಾಮಯ್ಯ ನೇತೃತ್ವದಲ್ಲಿ ಸರ್ಕಾರದಲ್ಲಿ ಸತೀಶ ಜಾರಕಿಹೊಳಿಗೆ ದೊಡ್ಡ ಹುದ್ದೆ ಸಿಗಬಹುದು ಎಂದು ಅಭಿಮಾನಿಗಳು ಕಾತುರದಿಂದ ಕಾಯುತ್ತಿದ್ದಾರೆ. ಸಿದ್ದರಾಮಯ್ಯ ಜೊತೆಗೆ ಅನೇಕ ವರ್ಷಗಳಿಂದ ತೀರ ಹತ್ತಿರದ ಸಂಬಂಧವನ್ನು ಸತೀಶ ಜಾರಕಿಹೊಳಿ ಹೊಂದಿದ್ದಾರೆ. ಪಕ್ಷ ಸಂಘಟನೆ, ಸಿದ್ದರಾಮಯ್ಯ ಜೊತೆಗಿನ ಒಡನಾಟ ಸತೀಶ ಜಾರಕಿಹೊಳಿಗೆ ವರವಾಗೋ ಸಾಧ್ಯತೆ ಇದೆ. ರಾಜ್ಯದಲ್ಲಿ ಡಿಸಿಎಂ ಸ್ಥಾನ ಜಾರಕಿಹೊಳಿಗೆ ನೀಡಬೇಕು ಎಂದು ಅಭಿಮಾನಿಗಳು ಆಗ್ರಹಿಸಿದ್ದಾರೆ. ಡಿಸಿಎಂ ಇಲ್ಲವೇ ಪ್ರಮುಖ ಖಾತೆ ಪಡೆದುಕೊಳ್ಳಲಿ ಎಂದು ಅವರ ಹಿತೈಶಿಗಳ ಒತ್ತಾಯವಾಗಿದೆ.

**ಲಕ್ಷ್ಮೀ ಅಕ್ಕಾ ಲಕ್ಕಿ, ಮಂತ್ರಿಯಾಗೋದು ನಕ್ಕಿ..!**

ಕಾಂಗ್ರೆಸ್ ಪಕ್ಷದ ಜಿಲ್ಲಾಧ್ಯಕ್ಷರಾಗಿ,ಕೆಪಿಸಿಸಿ ಮಹಿಳಾ ಅಧ್ಯಕ್ಷರಾಗಿ,ಪಕ್ಷದ ಸಂಘಟನೆಯ ಜೊತೆಗೆ ಕ್ಷೇತ್ರದಲ್ಲಿ ಅಭಿವೃದ್ಧಿಯ ಹೊಳೆ ಹ–ರಿಸಿ,ಅಪಾರ ಜನ ಮೆಚ್ಚುಗೆ ಗಳಿಸಿ,ಪ್ರಸಕ್ತ ಚುನಾವಣೆಯಲ್ಲಿ ರಾಜಕೀಯ ವೈ–ರಿಗಳಿಂದ,ಆರೋಪ,ಟೀಕೆ ಟಿಪ್ಪಣಿಗಳನ್ನು ಸಹಿಸಿ,ತೀವ್ರ ಪ್ರತಿರೋಧದ ನಡುವೆಯೂ ದಾಖಲೆ ಮತಗಳ ಅಂತರದಿಂದ ಗೆಲುವು ಸಾಧಿಸಿ ಎರಡನೇಯ ಬಾರಿಗೆ ಬೆಳಗಾವಿ ಗ್ರಾಮೀಣ ಕ್ಷೇತ್ರದ ಶಾಸಕಿ ಲಕ್ಷ್ಮೀ ಹೆಬ್ಬಾಳಕರ ಅವರ ಪರ್ವ ಈಗ ಬೆಳಗಾವಿ ಜಿಲ್ಲೆಯಲ್ಲಿ ಆರಂಭವಾಗಿದೆ. ಪಂಚಮಸಾಲಿ ಸಮಾಜದ ಮೀಸಲಾತಿ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿ ಲಿಂಗಾಯತ ಸಮಾಜದ ಪ್ರಬಲ ನಾಯಕಿಯಾಗಿ ಹೊರಹೊಮ್ಮಿರುವ ಹೆಬ್ಬಾಳಕರ ಈ ಬಾರಿ ಮಂತ್ರಿ ಆಗೋದು ಖಚಿತ ಎಂದು ಅವರ ಅಭಿಮಾನಿಗಳು ಈಗಿನಿಂದಲೇ ಶುಭಾಶಯ ಕೋರುತ್ತಿದ್ದಾರೆ. ಲಕ್ಷ್ಮೀ ಅಕ್ಕಾ ಲಕ್ಕಿ,ಈಬಾರಿ ಮಂತ್ರಿಯಾಗೋದು ನಕ್ಕಿ.ಅನ್ನೋದು ಅವರ ಅಭಿಮಾನಿಗಳ ವಿಶ್ವಾಸ.

# ಅಪರಿಚಿತ ವ್ಯಕ್ತಿ ಮೃತದೇಹ ಪತ್ತೆ

ಬೆಳಗಾವಿ: ಬೆಳಗಾವಿ ರೇಲ್ವೆ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಮೇ 16, 2023 ರಂದು (ಅಂದಾಜು 40– 45 ವರ್ಷ) ಅಪರಿಚಿತ ವ್ಯಕ್ತಿಯ ಮೃತದೇಹ ಪತ್ತೆಯಾಗಿದೆ.

ಉಗಾರ ಖುರ್ದ ಮತ್ತು ಶೇಡಬಾಳ ರೈಲು ನಿಲ್ದಾಣಗಳ ಮದ್ಯ ರೈಲು ಗಾಡಿಗೆ ಸಿಕ್ಕು ವ್ಯಕ್ತಿ ಮೃತಪಟ್ಟಿದ್ದು, ಸದರಿ ಪ್ರಕರಣವನ್ನು ದಾಖಲಿಸಿಕೊಂಡು ತನಿಖೆ ಕೈಗೊಂಡಿರುತ್ತಾರೆ.

**ಮೃತ ವ್ಯಕ್ತಿಯ ಚಹರೆ ಪಟ್ಟಿಯ ವಿವರ:**

ಅಂದಾಜು 5 ಪೂಟ 4 ಇಂಚ, ಉದ್ದು ಮುಖ, ನೆಟ್ಟನೆಮೂಗು, ಸಾದಾರನ ಮೈಕಟ್ಟು, ಕೆಂಪು ಮೈಬಣ್ಣ, ನೀಲಿ ಬಣ್ಣದ ಶರ್ಟ, ಬೂದು ಬಣ್ಣದ ಪ್ಯಾಂಟ್, ಧರಿಸಿರುತ್ತಾರೆ.

ಈ ರೀತಿ ಚಹರೆಯುಳ್ಳ ಮೃತ ವ್ಯಕ್ತಿಯ ವಾರಸುದಾರರು ಇದ್ದಲ್ಲಿ ಬೆಳಗಾವಿ ರೇಲ್ವೆ ಪೊಲೀಸ್ ಠಾಣೆ ದೂರವಾಣಿ ಸಂ–0831–2405273. ಪಿಎಸ್‌ಐ, ಮೊ.ನಂ:948082127 ಅಥವಾ ರೇಲ್ವೆ ಪೊಲೀಸ್ ನಿಯಂತ್ರಣ ಕೊಠಡಿ ದೂರವಾಣಿ ಸಂ 080 22871291 ಸಂಖ್ಯೆಗೆ ಸಂಪರ್ಕಿಸಬಹುದು ಎಂದು ಬೆಳಗಾವಿ ರೇಲ್ವೆ ಪೊಲೀಸ್ ಠಾಣೆಯ ಆರಕ್ಷಕ ಉಪರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿರುತ್ತಾರೆ.

# ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಜಿಲ್ಲೆಯ ಪ್ರತಿಷ್ಠಿತ ಶಾಲೆಗಳಲ್ಲಿ 6ನೇ ತರಗತಿ ಪ್ರವೇಶಕ್ಕಾಗಿ : ಅರ್ಜಿ ಆಹ್ವಾನ

ಬೆಳಗಾವಿ: 2023–24ನೇ ಸಾಲಿನ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳನ್ನು ಜಿಲ್ಲೆಯ ಪ್ರತಿಷ್ಠಿತ ಶಾಲೆಗಳಲ್ಲಿ 6ನೇ ತರಗತಿ ಪ್ರವೇಶಕ್ಕಾಗಿ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ: ಮೇ 25, 2023 ರವರಗೆ ಅರ್ಜಿಗಳನ್ನು ಸಲ್ಲಿಸಬಹುದು.

**ಷರತ್ತುಗಳು:**

ಅರ್ಜಿ ಸಲ್ಲಿಸುವ ವಿದ್ಯಾರ್ಥಿಯು ಬೆಳಗಾವಿ ಜಿಲ್ಲೆಯವರಾಗಿದ್ದು, ಪ.ಪಂ.ಕ್ಕೆ ಸೇರಿರಬೇಕು, ವಿದ್ಯಾರ್ಥಿ ತಂದೆ/ಪೋಷಕರ ವಾರ್ಷಿಕ ಆದಾಯ 2.00 ಲಕ್ಷ ಮಿತಿಯೊಳಗಿರಬೇಕು, ಅರ್ಜಿ ಸಲ್ಲಿಸುವಾಗ ಕಡ್ಡಾಯವಾಗಿ 5ನೇ ತರಗತಿಯ ಅಂಕ ಪಟ್ಟಿ, ಜಾತಿ ಪ್ರಮಾಣ, ಆದಾಯ ಪ್ರಮಾಣ ಪತ್ರ, ವಿದ್ಯಾರ್ಥಿಯ ಆಧಾರ ಕಾರ್ಡ ಲಗತ್ತಿಸಬೇಕು, ಅರ್ಹತಾ ಪರೀಕ್ಷೆ ಮೂಲಕ ನಿಯಮಾನುಸಾರ ಆಯ್ಕೆ ಪ್ರಕ್ರಿಯೆಯನ್ನು ಕೈಗೊಳ್ಳಲಾಗುವುದು,

ಹೆಚ್ಚಿನ ಮಾಹಿತಿ ಹಾಗೂ ಅರ್ಜಿಗಳಿಗಾಗಿ ಸಂಬಂಧಿಸಿದ ತಾಲ್ಲೂಕಿನ ಸಹಾಯಕ ನಿರ್ದೇಶಕರು ಅಥವಾ ಸಮಾಜ ಕಲ್ಯಾಣ ಇಲಾಖೆ ಹಾಗೂ ತಾಲ್ಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ 6ನೇ ತರಗತಿ ಪ್ರವೇಶಕ್ಕಾಗಿ ಅರ್ಜಿ ಆಹ್ವಾನ

ಬೆಳಗಾವಿ: 2023–24ನೇ ಸಾಲಿಗೆ ಪ್ರತಿಭಾವಂತ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳನ್ನು ಜಿಲ್ಲೆಯ ಪ್ರತಿಷ್ಠಿತ ಶಾಲೆಗಳಲ್ಲಿ 6ನೇ ತರಗತಿಯ ಪ್ರವೇಶಕ್ಕಾಗಿ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಸಂಬಂಧಿಸಿದ ತಾಲೂಕುಗಳ ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಕಾರ್ಯಾಲಯದಿಂದ ಮೇ.17 2023 ರಿಂದ ಅರ್ಜಿಗಳನ್ನು ಪಡೆದು ಮೇ.25 2023 ರ ಸಂಜೆ 5.30 ಗಂಟೆಯೊಳಗೆ ಸಲ್ಲಿಸಬಹುದು. ಅರ್ಜಿ ಸಲ್ಲಿಸುವ ವಿದ್ಯಾರ್ಥಿಯು ಬೆಳಗಾವಿ ಜಿಲ್ಲೆಯವರಾಗಿದ್ದು, ಪರಿಶಿಷ್ಟ ಜಾತಿಗೆ ಸೇರಿದವರಾಗಿರಬೇಕು. ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ಆದಾಯವು ರೂ 2.50 ಲಕ್ಷಗಳ ಮಿತಿಯೊಳಗಿರಬೇಕು. ವಿದ್ಯಾರ್ಥಿಯು 5ನೇ ತರಗತಿಯಲ್ಲಿ ತೇರ್ಗಡೆಯಾಗಿ ಶೇ.60 ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದಿರಬೇಕು.

ಅರ್ಹತಾ ಪರೀಕ್ಷೆ ಮೂಲಕ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುವದು. ಅರ್ಜಿ ಸಲ್ಲಿಸುವಾಗ ಕಡ್ಡಾಯವಾಗಿ 5ನೇ ತರಗತಿ ಅಂಕಪಟ್ಟಿ ಹಾಗೂ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಬೆಳಗಾವಿಯ ಅಪರ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆ, ಸಂಬಂಧಿಸಿದ ತಾಲೂಕುಗಳ ಸಹಾಯಕ ನಿರ್ದೇಶಕರು ಸಮಾಜ ಕಲ್ಯಾಣ ಇಲಾಖೆಗೆ ಸಂಪರ್ಕಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆ ಅಪರ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ


ಬೆಳಗಾವಿ: ಬೆಳಗಾವಿಯ ಸರ್ಕಾರಿ ಪಾಲಿಟೆಕ್ನಿಕ್ ಸಂಸ್ಥೆಗೆ ಪೂರ್ಣಾವಧಿಯ ಇಂಜಿನಿಯರಿಂಗ್ & ನಾನ್ ಇಂಜಿನಿಯರಿಂಗ್ ಪ್ರಥಮ ಸೆಮಿಸ್ಟರ್ ಡಿಪ್ಲೋಮಾ ಕೋರ್ಸುಗಳಿಗೆ 2023–24ನೇ ಶೈಕ್ಷಣಿಕ ಸಾಲಿಗೆ ಮೆರಿಟ್/ಮೀಸಲಾತಿ ಆಧಾರಿತ ಆನ್‌ಲೈನ್ ನಾನ್ ಇಂಟರ್ಯಾಕ್ಟೀವ್ ಪ್ರವೇಶಾತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದ್ದು, ಭರ್ತಿ ಮಾಡಿದ ಅರ್ಜಿಗಳನ್ನು ಅಗತ್ಯ ದಾಖಲೆಗಳೊಂದಿಗೆ ಮೇ.18 2023 ರೊಳಗಾಗಿ ಸಲ್ಲಿಸಲು ಸೂಚಿಸಲಾಗಿತ್ತು.

ಸದರಿ ದಿನಾಂಕವನ್ನು ಮೇ.22 2023 ರವರೆಗೆ ವಿಸ್ತರಿಸಲಾಗಿದೆ ಆದ್ದರಿಂದ ಸೂಕ್ತ ದಾಖಲಾತಿಗಳೊಂದಿಗೆ ನಿಗದಿತ ದಿನಾಂಕದೊಳಗಾಗಿ ಸಲ್ಲಿಸಬೇಕು.

ಹಾಗೂ ಹೆಚ್ಚಿನ ಮಾಹಿತಿಗಾಗಿ ಸಂಸ್ಥೆಯ ಪ್ರಾಂಶುಪಾಲರಾದ ವಾಸುದೇವ ಕೆ. ಅಪ್ಪಾಜಿಗೋಳ ದೂರವಾಣಿ ಸಂಖ್ಯೆ 9482205080 ಇವರನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

# ಪ್ರತ್ಯೇಕ ಲಿಂಗಾಯತ ಧರ್ಮಕ್ಕೆ ಮಾನ್ಯತೆಗೆ ಪುನರ್ ಪರಿಶೀಲನೆಗೆ ಕೇಂದ್ರಕ್ಕೆ ಮತ್ತೆ ಪ್ರಸ್ತಾವ ಸಲ್ಲಿಸಬೇಕು: ಎಸ್.ಎಂ. ಜಾಮದಾರ

ಹುಬ್ಬಳ್ಳಿ: 'ಸಿದ್ದರಾಮಯ್ಯ ನೇತೃತ್ವದಲ್ಲಿ ಅಧಿಕಾರಕ್ಕೆ ಬರಲಿರುವ ರಾಜ್ಯ ಕಾಂಗ್ರೆಸ್ ಸರ್ಕಾರವು, ಪ್ರತ್ಯೇಕ ಲಿಂಗಾಯತ ಧರ್ಮಕ್ಕೆ ಮಾನ್ಯತೆ ನೀಡುವುದರ ಕುರಿತು, ಪುನರ್ ಪರಿಶೀಲಿಸುವಂತೆ ಕೇಂದ್ರ ಸರ್ಕಾರಕ್ಕೆ ಮತ್ತೆ ಪ್ರಸ್ತಾವ ಕಳಿಸಿ ಕೊಡಬೇಕು' ಎಂದು ಜಾಗತಿಕ ಲಿಂಗಾಯತ ಮಹಾಸಭಾದ ಮಹಾಪ್ರಧಾನ ಕಾರ್ಯದರ್ಶಿ ಎಸ್.ಎಂ. ಜಾಮದಾರ ಒತ್ತಾಯಿಸಿದರು.



ನಗರದಲ್ಲಿ ಗುರುವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಹಿಂದೆ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ ಕಳಿಸಿದ್ದ ಪ್ರಸ್ತಾವವನ್ನು ಕೇಂದ್ರ ಸರ್ಕಾರ ವಾಪಸ್ ಕಳಿಸಿತ್ತು. ಹಾಗಾಗಿ, ಮತ್ತೊಮ್ಮೆ ಪ್ರಸ್ತಾವ ಕಳಿಸಬೇಕು. ಒಂದು ವೇಳೆ ಪ್ರಸ್ತಾವ ಕಳಿಸಿ ಕೊಡದಿದ್ದರೆ ಕೋರ್ಟ್ ಮೆಟ್ಟಿಲೇರುತ್ತೇವೆ' ಎಂದು ಎಚ್ಚರಿಕೆ ನೀಡಿದರು.

'ಹಿಂದಿನ ಬಿಜೆಪಿ ಸರ್ಕಾರದಲ್ಲಿ ಲಿಂಗಾಯತರೇ ಮುಖ್ಯಮಂತ್ರಿಯಾಗಿದ್ದರೂ, ಅವರ ಪಕ್ಷ ಮತ್ತು ಆರೆಸ್ಸೆಸ್ ಕಾರಣಕ್ಕಾಗಿ ನಮ್ಮ ಬೇಡಿಕೆಗೆ ಸ್ಪಂದಿಸಲಿಲ್ಲ. ರಾಜ್ಯದ ಚುಕ್ಕಾಣಿ ಹಿಡಿಯಲಿರುವ ಸಿದ್ದರಾಮಯ್ಯ ಅವರ ಮೇಲೆ ನಾವು ನಿರೀಕ್ಷೆ ಇಟ್ಟುಕೊಂಡಿದ್ದೇವೆ. ಅಗತ್ಯ ಬಿದ್ದರೆ, ನಮ್ಮ ನಿಯೋಗ ಅವರನ್ನು ಭೇಟಿ ಮಾಡಲಿದೆ' ಎಂದರು.

'ಪ್ರತ್ಯೇಕ ಲಿಂಗಾಯತ ಧರ್ಮದ ಹೋರಾಟವು ಸಾಮಾಜಿಕ ಚಳವಳಿ ಬದಲು, ರಾಜಕೀಯ ಚಳವಳಿಯಾಗಬೇಕು. ಹಿಂದೆ ರಾಜಕೀಯ ಬೆರೆತಿದ್ದರಿಂದಲೇ ಧರ್ಮ ಒಡೆದರು ಎಂದು ಬೊಬ್ಬೆ ಇಟ್ಟು ಚಳವಳಿಯನ್ನು ಬದಿಗೆ ಸರಿಸಿದರು. ಅದರ ಪರಿಣಾಮದ ಜೊತೆಗೆ, ಬಿಜೆಪಿಯಲ್ಲಿ ಲಿಂಗಾಯತರನ್ನು ನಡೆಸಿಕೊಂಡ ರೀತಿಯಿಂದಾಗಿ, ಸಮುದಾಯ ಈ ಸಲ ಕಾಂಗ್ರೆಸ್ ಬೆಂಬಲಿಸಿದೆ' ಎಂದು ಹೇಳಿದರು.

**ಡಿಸಿಎಂಗೆ ಪರಿಗಣಿಸಿ:**


"ಲಿಂಗಾಯತ,ಪರಿಶಿಷ್ಟಹಾಗೂ ಮುಸ್ಲಿಂ ಸಮುದಾಯದ ಬೆಂಬಲದಿಂದಾಗಿ ಕಾಂಗ್ರೆಸ್ ಬಹುಮತ ಪಡೆದಿರುವುದರಿಂದ, ಅವರನ್ನೂ ಡಿಸಿಎಂ ಹುದ್ದೆಗೆ ಪರಿಗಣಿಸಬೇಕು. ಇಲ್ಲದಿದ್ದರೆ, ಲೋಕಸಭಾ ಚುನಾವಣೆಯಲ್ಲಿ ಪರಿಣಾಮ ಎದುರಿಸಬೇಕಾಗುತ್ತದೆ' ಎಂದು ಎಚ್ಚರಿಕೆ ನೀಡಿದರು.

**'ಡಿಕೆಶಿಗೆ ಲಿಂಗಾಯತರ ಬಗ್ಗೆ ಮಾತಾಡುವ ನೈತಿಕತೆ ಇಲ್ಲ'**

'ವೀರಶೈವ ಲಿಂಗಾಯತ ಸಂಘಟನೆಗಳ ಸ್ವಾಮೀಜಿಗಳ ಬೆಂಬಲ ನನಗಿದೆ ಎಂದು ಡಿ.ಕೆ. ಶಿವಕುಮಾರ್ ಹೇಳಿಕೊಂಡಿದ್ದಾರೆ. ಪಂಚಪೀಠದ ನಾಲ್ವರು ವೀರಶೈವ ಸ್ವಾಮೀಜಿಗಳು ಅವರಿಗೆ ಬೆಂಬಲ ನೀಡಿರಬಹುದು. ಹಾಗೆಂತ, ಇಡೀ ಲಿಂಗಾಯತರ ಬೆಂಬಲವಿದೆ ಎಂದು ಭಾವಿಸಬಾರದು. ಸಿದ್ದರಾಮಯ್ಯ ಮತ್ತು ಎಂ.ಬಿ. ಪಾಟೀಲ ಅವರನ್ನು ಪರೋಕ್ಷವಾಗಿ ಹಣಿಯಲು ಅವರು ರೀತಿ ಹೇಳಿದ್ದಾರೆ. ಹಿಂದೆ ಕಾಂಗ್ರೆಸ್‌ನವರು ಧರ್ಮ ಒಡೆದರು ಎಂದು ವೀರಶೈವರು ಬೊಬ್ಬೆ ಹಾಕಿದ್ದರು. ಚುನಾವಣೆಯಲ್ಲಿ ಕಾಂಗ್ರೆಸ್ ಸೋತಿದ್ದಕ್ಕೆ ಧರ್ಮದ ವಿಷಯವೇ ಕಾರಣವಾಯಿತು ಎಂದು ಶಿವಕುಮಾರ್ ಕ್ಷಮೆ ಕೋರಿದ್ದರು. ಅವರಿಗೆ ನಮ್ಮ ಸಮುದಾಯದ ಬಗ್ಗೆ ಮಾತನಾಡುವ ನೈತಿಕ ಹಕ್ಕಿಲ್ಲ' ಎಂದು ಎಸ್.ಎಂ. ಜಾಮದಾರ ಹೇಳಿದರು.

# ಶಿವಾನಂದ ಪಾಟೀಲರಿಗೆ ಸಚಿವ ಸ್ಥಾನಕ್ಕೆ ಒತ್ತಾಯ

ತಾಳಿಕೊಟೆ: ಬಸವನ ಬಾಗೇವಾಡಿ ಮತಕ್ಷೇತ್ರದಿಂದ ಭಾರಿ ಅಂತರದಲ್ಲಿ ಹ್ಯಾಟ್ರೀಕ್ ಗೆಲುವು ಸಾಧಿಸಿರುವ ಶಾಸಕ ಶಿವಾನಂದ ಪಾಟೀಲ ಅವರಿಗೆ ಈ ಭಾರಿಯ ಸಚೀವ ಸಂಪುಟದಲ್ಲಿ ಕ್ಯಾಬಿನೇಟ್ ದರ್ಜೆಯ ಸಚೀವ ಸ್ಥಾನ ನೀಡಬೇಕೆಂದು ಶಿವಾನಂದ ಪಾಟೀಲ ಅವರ ಅಭಿಮಾನಿ ಬಳಗದ ಅಧ್ಯಕ್ಷ ರಘುರಾಮಸಿಂಗ್ ಹಜೇರಿ ಅವರು ಸಿದ್ದರಾಮಯ್ಯ ಮತ್ತು ಡಿಕೆ ಶಿವಕುಮಾರ ಅವರಲ್ಲಿ ಒತ್ತಾಯಿಸಿದ್ದಾರೆ.



ಗುರುವಾರರಂದು ಸುದ್ದಿ ಗೋಷ್ಠಿಯಲ್ಲಿ ಮಾತನಾಡುತ್ತಿದ್ದ ಅವರು ಶಿವಾನಂದ ಪಾಟೀಲ ಅವರು 6ಭಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ ಈ ಹಿಂದೆ ಸಚೀವರಾಗಿ ಅನೇಕ ಯೋಜನೆಗಳನ್ನು ಜಾರಿಗೆ ತಂದು ರಾಜ್ಯದ ಜನರ ಸೇವೆ ಸಲ್ಲಿಸಿದ ಅನುಭವ ಅವರಲ್ಲಿದೆ ಮತ್ತು ಮತಕ್ಷೇತ್ರದಲ್ಲಿ ನೀರಾವರಿ, ಕುಡಿಯುವ ನೀರಿನ ಯೋಜನೆ ಅಲ್ಲದೇ ರಸ್ತೆ ಅಭಿವೃದ್ದಿ ಯೊಳಗೊಂಡು ಅನೇಕ ಅಭಿವೃದ್ದಿ ಕೆಲಸಗಳನ್ನು ಮಾಡಿದ್ದಾರೆ ಸಹಕಾರಿ ರಂಗದಲ್ಲಿಯೂ ಅವರ ಸೇವೆ ಅನುಪಮವಾದುದ್ದಾಗಿದೆ.

ಉತ್ತರ ಕರ್ನಾಟಕದಲ್ಲಿ ಪ್ರಭಲ ಲಿಂಗಾಯತ ನಾಯಕರುಕೂಡಾ ಆಗಿದ್ದು ಈ ಭಾರಿಯ ಸಚೀವ ಸಂಪುಟದಲ್ಲಿ ಶಾಸಕ ಶಿವಾನಂದ ಪಾಟೀಲ ಅವರಿಗೆ ಸ್ಥಾನ ಒದಗಿಸಿ ಉತ್ತರ ಕರ್ನಾಟಕ ಭಾಗದಲ್ಲಿ ಪಕ್ಷ ಸಂಘಟನೆಯ ಜೊತೆಗೆ ಅಭಿವೃದ್ದಿ ಕಾರ್ಯಗಳಿಗೆ ಶಕ್ತಿ ತುಂಬುವಂತಹ ಕೆಲಸ ಮಾಡಬೇಕಿದೆ ಈ ನಿಟ್ಟಿನಲ್ಲಿ ಸೀಘ್ರದಲ್ಲಿಯೇ ನಿಯೋಗ ದೊಂದಿಗೆ ಕಾಂಗ್ರೇಸ್ ಹೈಕಮಾಂಡನ ಎಲ್ಲ ನಾಯಕರುಗಳಿಗೆ ಬೆಟ್ಟಿಯಾಗಿ ಸಚೀವ ಸ್ಥಾನಕ್ಕಾಗಿ ಒತ್ತಾಯಿಸಲಿದ್ದೇವೆಂದರು.

# ಖೊಟ್ಟಿ ಮತದಾರರ ಸೇರ್ಪಡೆ: ನ್ಯಾಯಾಂಗ ತನಿಖೆಗೆ ಹಮೀದ್ ಮುಶ್ರಫ್ ಆಗ್ರಹ



ವಿಜಯಪುರ ನಗರ ಮತಕ್ಷೇತ್ರದ ಕಾಂಗ್ರೆಸ್ ಪಕ್ಷದ ಪರಾಜಿತ ಅಭ್ಯರ್ಥಿ ಅಬ್ದುಲ್ ಹಮೀದ್ ಮುಶ್ರೀಫ್ ರವರ ನೇತೃತ್ವದಲ್ಲಿ, ವಿಜಯಪುರ ನಗರ ಮತಕ್ಷೇತ್ರದಲ್ಲಿ ಖೊಟ್ಟಿ ಮತದಾರರ ಹೆಸರು ಸೇರ್ಪಡೆಗೆ ನ್ಯಾಯಾಂಗ ತನಿಖೆಗೆ ಆಗ್ರಹಿಸಿ ಮಾನ್ಯ ಜಿಲ್ಲಾಧಿಕಾರಿಗಳ ಮುಖಾಂತರ ಘನತೆವೆತ್ತ ರಾಷ್ಟ್ರಪತಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ಮಹಾನಗರ ಪಾಲಿಕೆ ಮಾಜಿ ಮೇಯರ್ ಸಜ್ಜಾದೆಪೀರಾ ಮುಶ್ರೀಫ್, ಅಬ್ದುಲ್ ರಜಾಕ್ ಹೊರ್ತಿ, ಅಲ್ತಾಫ್ ಇಟಗಿ, ಆಸಿಫ್ ಶಾನವಾಲೆ,ಅಪ್ಪು ಪೂಜಾರಿ,ದಿನೇಶ್ ಹಳ್ಳಿ, ಜಮೀರ ಬಾಂಗಿ,ಮೈನುದ್ದೀನ ಬೀಳಗಿ, ವೈಜನಾಥ ಕಪೂರಮಠ,ಗಿರೀಶ್ ಇಟ್ಟಂಗಿ, ಶಬ್ಬೀರ ಜಾಗೀರದಾರ,ವಸಂತ ಹೊನಮೊಡೆ, ಅಪ್ಜಲ್ ಜಾನವೆಕರ,ಸದ್ದಾಂ ಇನಾಮದಾರ, ಭಾರತಿ ಹೊಸಮನಿ,ರಾಜೇಶ್ವರಿ ಚೋಳಕೆ,ಆಸ್ಮಾ ಕಾಲೆಬಾಗ,ರೂಬಿನಾ ಹಳ್ಳೂರ,ಶಮಿಮ್ ಅಕ್ಕಲಕೋಟ, ಧನರಾಜಎ,ಹಾಜಿಲಾಲ ದಳವಾಯಿ,ಚನ್ನಬಸಪ್ಪ ನಂದರಗಿ ಮುಂತಾದವರು ಉಪಸ್ಥಿತರಿದ್ದರು.





ಬೆಂಗಳೂರಿನ ಕ್ವೀನ್ಸ್ ರಸ್ತೆಯ ಭಾರತ್ ಜೋಡೋ ಭವನದಲ್ಲಿ ಗುರುವಾರ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೆವಾಲ, ವೀಕ್ಷಕರಾದ ಸುಶೀಲ್ ಕುಮಾರ್ ಶಿಂದೆ, ಜೀತೇಂದ್ರ ಸಿಂಗ್, ಕಾಂಗ್ರೆಸ್ ಶಾಸಕಾಂಗ ಪಕ್ಷದ ನೂತನ ನಾಯಕ, ನಿಯೋಜಿತ ಸಿಎಂ ಸಿದ್ದರಾಮಯ್ಯ, ನಿಯೋಜಿತ ಡಿಸಿಎಂ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ ಕೆ ಶಿವಕುಮಾರ್, ನಾಯಕ ಬಿ ಕೆ ಹರಿಪ್ರಸಾದ್ ಮತ್ತಿತರರು ಭಾಗವಹಿಸಿದ್ದರು.

# ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದಿಂದ ವಿವಿಧ ಪದವಿ ಮತ್ತು ಸ್ನಾತಕೋತ್ತರ ಪದವಿ ಪಡೆದವರಿಗೆ ನೇರ ಸಂದರ್ಶನ

ಬೆಳಗಾವಿ: ನಗರದ ಉದ್ಯೋಗ ವಿನಿಮಯ ಕೇಂದ್ರದ ವತಿಯಿಂದ ಮೇ 24 2023 ರಂದು ಮುಂಜಾನೆ 10:30 ರಿಂದ ಮಧ್ಯಾಹ್ನ 1:30 ಗಂಟೆಯವರೆಗೆ ವಿವಿಧ ಪದವಿ ಸ್ನಾತಕೋತ್ತರ ಪದವಿ ವಿದ್ಯಾರ್ಹತೆ ಹೊಂದಿರುವ ಅಭ್ಯರ್ಥಿಗಳಿಗಾಗಿ ಖಾಸಗಿ ಕಂಪನಿಗಳಿಂದ ನೇರ ಸಂದರ್ಶನವನ್ನು (WALK IN DRIVER) ಬಸ್ತವಾಡ ಗ್ರಾಮ ಪಂಚಾಯಿತಿಯಲ್ಲಿ ಆಯೋಜಿಸಲಾಗಿದೆ.

ವಿದ್ಯಾರ್ಹತೆ : ಪಿಯುಸಿ,ಐಟಿಐ, (ಫಿಟ್ಟರ್, ವೆಲ್ಡರ್, ಮಷೀನಿಷ್ಟ್ ಎಲೆಕ್ಟ್ರಿಷಿಯನ್) ಹಾಗೂ ಡಿಪ್ಲೋಮಾ ಮತ್ತು ಯಾವುದೇ ಪದವಿ, ಯಾವುದೇ ಸ್ನಾತಕೋತ್ತರ ಪದವಿ ಹೊಂದಿರಬೇಕು.

ಆಸಕ್ತ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು https://forms.gle/RzAn-7fBMSGYk35pL8 ವೆಬ್ ಸೈಟ್ ನಲ್ಲಿ ಹೆಸರುಗಳನ್ನು ನೋಂದಾಯಿಸಿಕೊಳ್ಳಬಹುದು.

ಅಭ್ಯರ್ಥಿಗಳಿಗೆ ಉದ್ಯೋಗವಕಾಶ ಉಚಿತವಾಗಿದ್ದು ಇನ್ನುಳಿದ ಯಾವುದೇ ಸೌಲಭ್ಯಗಳು ಇರುವುದಿಲ್ಲ ಸದರಿ ಸಂದರ್ಶನದಲ್ಲಿ ಪ್ರತಿಷ್ಠಿತ ಖಾಸಗಿ ಕಂಪನಿಗಳು ಭಾಗವಹಿಸುತ್ತವೆ.

ಆಸಕ್ತ ಅಭ್ಯರ್ಥಿಗಳು ಹೆಚ್ಚಿನ ಮಾಹಿತಿಗಾಗಿ ವೆಬ್ ಸೈಟ ಗೆ ಭೇಟಿ ನೀಡಬಹುದು ಅಥವಾ 8147685479, 9880149513 ಈ ಮೊಬೈಲ್ ಸಂಖ್ಯೆಗೆ ಸಂಪರ್ಕಿಸಬಹು ಎಂದು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜಮೀರ್ ಅಹಮದ್‌ಗೆ ಉಪಮುಖ್ಯಮಂತ್ರಿ ಮಾಡಿ

ಹುಳಿಯಾರು: ಮುಸ್ಲಿಂ ಸಮುದಾಯದ ರಾಜ್ಯ ನಾಯಕ ಜ್ಯಾತ್ಯಾತೀತ ವ್ಯಕ್ತಿ ಜಮೀರ್ ಅಹಮದ್ ಅವರನ್ನು ಉಪಮುಖ್ಯಮಂತ್ರಿ ಮಾಡುವಂತೆ ಜಿಲ್ಲಾ ಖಾದಿ ನಿಗಮದ ಮಾಜಿ ಅಧ್ಯಕ್ಷ ಜಬೀಉಲ್ಲಾ ಕಾಂಗ್ರೆಸ್ ಹೈ ಕಮಾಂಡ್‌ಗೆ ಮನವಿ ಮಾಡಿದ್ದಾರೆ.



ಅಲ್ಪಸಂಖ್ಯಾತ ಕಲ್ಯಾಣ ಇಲಾಖೆಯ ಹಾಗೂ ನಿಗಮದಿಂದ ಜಾರಿಯಲ್ಲಿದ್ದ ಯೋಜನೆಗಳನ್ನು ದ್ವೇಷದಿಂದ ರದ್ದುಗೊಳಿಸಿರುವುದು ಮತ್ತು ಅನುದಾನ ಕಡಿತಗೊಳಿಸಿ ತಾರತಮ್ಯ ಮಾಡಿರುವುದು, ಮೀಸಲಾತಿ ರದ್ದುಗೊಳಿಸಿರುವುದು ಮುಸ್ಲಿಂ ಸಮುದಾಯದ ಬೇಗುದಿಗೆ ಕಾರಣವಾಗಿತ್ತು. ಇದೆಲ್ಲವನ್ನು ಸೂಕ್ಷ್ಮವಾಗಿ ಗಮನಿಸಿದ ಮುಸ್ಲಿಂ ಸಮುದಾಯ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ವ್ಯಾಪಕ ಬೆಂಬಲ ನೀಡಿದ ಕಾರಣ ಭರ್ಜರಿ ಜಯ ಸಿಕ್ಕಿದೆ. ಆದ್ದರಿಂದ, ಮುಸ್ಲಿಂ ಮತದಾರರ ಪಾತ್ರವನ್ನು ಗುರುತಿಸಿ, ಮುಸ್ಲಿಂ ಶಾಸಕರಿಗೆ ಸೂಕ್ತ ಸ್ಥಾನಮಾನಗಳನ್ನು ನೀಡಬೇಕು ಎಂದು ಒತ್ತಾಯಿಸಿದರು.

ಕಾಂಗ್ರೆಸ್ ಪಕ್ಷದಲ್ಲಿ 9 ಮುಸ್ಲಿಂ ಅಭ್ಯರ್ಥಿಗಳು ಗೆದ್ದಿದ್ದಾರೆ.

ಇವರಲ್ಲಿ ಜಮೀರ್ ಅಹಮದ್ ಅವರಿಗೆ ಉಪಮುಖ್ಯಮಂತ್ರಿ, ಖಾದರ್ ಅವರಿಗೆ ಕ್ಯಾಬಿನೆಟ್ ದರ್ಜೆಯ ಸಚಿವ ಸ್ಥಾನ ನೀಡಬೇಕು. 2 ಬಿ ಮೀಸಲಾತಿ ಪರಿಹಾರ ಸೇರಿದಂತೆ ಕಡಿತಗೊಂಡಿರುವ ವಿದ್ಯಾರ್ಥಿವೇತನ ನೀಡುವ ಜೊತೆಗೆ ಮುಸ್ಲಿಂ ಸಮುದಾಯದ ಅಭಿವೃದ್ಧಿಗೆ ಹೆಚ್ಚು ಅನುದಾನ ನೀಡಬೇಕು. ಆಗ ಮಾತ್ರ ಲೋಕಸಭೆಯಲ್ಲಿ ಕಾಂಗ್ರೆಸ್ ಹೆಚ್ಚು ಸ್ಥಾನ ಗೆಲ್ಲಬಹುದು ಎಂದು ಜಬೀಉಲ್ಲಾ ತಿಳಿಸಿದರು.

# ಬೈಕ್ ಗೆ ಹಿಂಬದಿಯಿಂದ ಲಾರಿ ಡಿಕ್ಕಿ; ಮಹಿಳೆಯ ದುರ್ಮರಣ



ವಿಜಯಪುರ: ಬೈಕ್‌ಗೆ ಹಿಂಬದಿ ಯಿಂದ ಲಾರಿ ಡಿಕ್ಕಿಯಾಗಿರುವ ಪರಿಣಾಮ ಓರ್ವ ಬೈಕ್ ಸವಾರ ಸ್ಥಳದಲ್ಲಿಯೇ ಅಸುನೀಗಿರುವ ಘಟನೆ ವಿಜಯಪುರದ ತೊರವಿ ರಸ್ತೆಯಲ್ಲಿ ಗುರುವಾರ ನಡೆದಿದೆ.

ಇನ್ನು ಬೈಕ್‌ನಲ್ಲಿದ ಹಿಂಬದಿಯ ಮಹಿಳೆ ಮೃತಪಟ್ಟಿದ್ದಾಳೆ.ಆದ್ರೇ, ಮಹಿಳೆಯ ಹೆಸರು ತಿಳಿದುಬಂದಿಲ್ಲ. ಅಲ್ಲದೇ, ಬೈಕ್ ಸವಾರ ಗಂಭೀರವಾಗಿ ಗಾಯಗೊಂಡಿದ್ದಾನೆ. ಏಂ 28 ಇಈ 3015 ಬೈಕ್‌ಗೆ ಏಂ 28 ಅ 5824 ಲಾರಿ ಡಿಕ್ಕಿಯಾಗಿದೆ.

ಅಲ್ಲದೇ, ಎರಡು ವಾಹನಗಳನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

ವಿಜಯಪುರ ಗ್ರಾಮೀಣ ಪೊಲೀಸ ಠಾಣಾ ವ್ಯಾಪ್ತಿಯಲ್ಲಿ ಘಟನೆ ಸಂಭವಿಸಿದೆ.

# ರಾಗರಶ್ಮಿ ಸಂಗೀತ ಸಂಜೆ

ಧಾರವಾಡ: ನಗರದ ಇಂಚರ ಫೌಂಡೇಶನ್ ದವರು ರಾಗರಶ್ಮಿ ಸಂಗೀತ ಸಂಜೆಯನ್ನು ಇದೇ ದಿ. 20 ರವಿವಾರದಂದು ಸಾಯಂಕಾಲ 4 ಗಂಟೆಗೆ ಧಾರವಾಡದ ರಂಗಾಯಣ ಸಭಾಭವನದಲ್ಲಿ ಹಮ್ಮಿಕೊಂಡಿದ್ದಾರೆ. ಮುಖ್ಯ ಅತಿಥಿಗಳಾಗಿ ಮಾಜಿ ಉಪಮಹಾಪೌರರಾದ ದೀಪಕ ಚಿಂಚೋರೆ ಆಗಮಿಸಲಿದ್ದಾರೆ. ಅತಿಥಿಗಳಾಗಿ ಕಲ್ಯಾಣನಗರದಲ್ಲಿರುವ ರಾಮಕೃಷ್ಣ ವಿವೇಕಾನಂದ ಆಶ್ರಮದ ಧರ್ಮದರ್ಶಿಗಳಾದ ಸಂಭಾಜಿ ಎಸ್. ಕಲಾಲ, ಕವಿವ ಸಂಘದ ಕೋಶಾಧ್ಯಕ್ಷರಾದ ಸತೀಶ ತುರಮರಿ, ಗೋವಾ ಶಿಪ್ ಯಾರ್ಡದ ನಿವೃತ್ತ ಜನರಲ್ ಮ್ಯಾನೇಜರ್ ಎನ್. ಕೆ. ಕುಲಕರ್ಣಿ, ಸೌಂದರ್ಯ ಲಹರಿ ಮಹಿಳಾ ಮಂಡಳದ ಅಧ್ಯಕ್ಷರಾದ ವಿಜಯಾ ನಾಯಕ ಆಗಮಿಸಲಿದ್ದಾರೆ.

ಚಿತ್ರಗೀತೆ, ನಗೆಹನಿಗಳ ಮೂಲಕ ಜನರನ್ನು ರಂಜಿಸಲಿರುವ ಈ ಕಾರ್ಯಕ್ರಮದ ಪ್ರವೇಶ ಉಚಿತವಾಗಿದ್ದು ಇದರ ಸದುಪಯೋಗ ಪಡೆಯುವಂತೆ ಇಂಚರ ಫೌಂಡೇಶನ್ ಅಧ್ಯಕ್ಷೆ ಶ್ರೀಮತಿ ರಶ್ಮಿ ಕುಲಕರ್ಣಿ ಪ್ರಕಟನೆಯಲ್ಲಿ ತಿಳಿಸಿದ್ದಾರೆ.

# ಪಿ.ಎಚ್.ಡಿ ಪದವಿ ಪ್ರಧಾನ

ಬೆಳಗಾವಿ: ಜಿಲ್ಲೆಯ ಯಮಕನಮರಡಿ ಸಮೀಪ ಇರುವ ಹಾಲಭಾವಿ ಎಂಬ ಚಿಕ್ಕ ಗ್ರಾಮದ, ಅತೀ ಹಿಂದುಳಿದ ಸಮುದಾಯದ, ಅನಕ್ಷರಸ್ಥ ತಂದೆ–ತಾಯಿಯ ಮಗನಾಗಿ ಜನಸಿದ ಇವರು ಹತ್ತನೇ ತರಗತಿಯಲ್ಲಿ ನಾಲ್ಕು ಬಾರಿ ಅನುತ್ತೀರ್ಣರಾಗಿ ಎರಡು ವರ್ಷಗಳ ಕಾಲ ದನ ಮೇಯಿಸುತ್ತಾ ಕಾಲ ಕಳೆಯುತ್ತಿದ್ದರಂತೆ.



ಆದರೆ ಅದು ಅವರ ಪಾಲಕರಿಗೆ ಇಷ್ಟವಿರಲಿಲ್ಲ. ಹೇಗಾದರೂ ಮಾಡಿ ಮಗನಿಗೆ ಶಿಕ್ಷಣ ಕೊಡಬೇಕೆಂಬ ಹಂಬಲ ಅವರದಾಗಿತ್ತು.

ಆದ್ದರಿಂದ ಪಾಲಕರ ಕಿರಿಕಿರಿಗೆ ಬೇಸತ್ತು ಅವರ ಆಸೆ ಈಡೇರಿಸಬೇಕೆಂದು ಮನೆ ತೊರೆದು ಬೆಳಗಾವಿ ನಗರಕ್ಕೆ ಬಂದು ಹಾಸ್ಟೆಲ್ ಸೇರಿಕೊಂಡ ಇವರು ಹತ್ತಾರು ವರ್ಷಗಳ ಕಾಲ ಅಲ್ಲಿಯೇ ಓದುತ್ತ ಓದುತ್ತ ಬಿ.ಎ, ಪದವಿ ಮುಗಿಸಿಕೊಂಡು ಹಗಾಯೇ ಮುಂದುವರೆದು ಬಿ. ಎಡ್, ಅರ್ಥಶಾಸ್ತ್ರದಲ್ಲಿ ಎಂ.ಎ., ಕನ್ನಡದಲ್ಲಿ ಎಂ. ಎ., ಎರಡು ಬಾರಿ ನೆಟ್ ಪರೀಕ್ಷೆ ಪಾಸಾಗಿ ಬಡತನದ ಪರಿಸ್ಥಿತಿಯ ಕುಟುಂಬದಲ್ಲಿ ಬೆಳೆದು, ಸಮಸ್ಯೆಗಳಿಗೆ ಎದೆಯೊಡ್ಡಿ, ಕಲಿಕೆಯನ್ನು ಮುಂದುವರೆಸಿ, ಇಂದು ಡಾಕ್ಟರ್ ಆಫ್ ಫಿಲಾಸಫಿ ಪದವಿ ಪಡೆದಿದ್ದು ಮಹಾ ಸಾಧನೆಯೇ ಎನಿಸಿದೆ.

ಯಮಕನಮರಡಿ ಸಮೀಪದ ಹಾಲಭಾವಿ ಎಂಬ ಗ್ರಾಮದ ಬಾಳಕೃಷ್ಣ ನಾಯಕ ಎಂಬ ಸಂಶೋಧನಾ ವಿದ್ಯಾರ್ಥಿಯು, ಬೆಳಗಾವಿಯ ರಾಣಿ ಚನ್ನಮ್ಮ ವಿಶ್ವವಿದ್ಯಾಲಯಕ್ಕೆ, ಕನ್ನಡ ವಿಷಯದಲ್ಲಿ, ತಮ್ಮ ಮಹಾಪ್ರಬಂಧವನ್ನು ಮಂಡಿಸಿ, ಅನುಮೋದನೆ ಪಡೆಯುವ ಮೂಲಕ ತಮ್ಮ ಪದವಿ ಪಡೆದುಕೊಂಡಿದ್ದಾರೆ.

# ರಾಜ್ಯದ ನೀರಾವರಿ ಅಭಿವೃದ್ಧಿಗಾಗಿ ಜಯಚಂದ್ರಗೆ ನೀರಾವರಿ ಖಾತೆ ನೀಡಿ

ಹುಳಿಯಾರು: ರಾಜ್ಯದ ನೀರಾವರಿ ಕ್ಷೇತ್ರದ ಅಭಿವೃದ್ಧಿಗಾಗಿ ಈ ಕ್ಷೇತ್ರದಲ್ಲಿ ಅಪಾರ ಜ್ಞಾನವುಳ್ಳ ಶಿರಾ ಕ್ಷೇತ್ರದ ಶಾಸಕ ಟಿ.ಬಿ. ಜಯಚಂದ್ರಗೆ ಜಲಸಮಪನ್ಮೂಲ ಖಾತೆ ನೀಡುವಂತೆ ಜಿಲ್ಲಾ ಕಾಂಗ್ರೆಸ್ ಸದಸ್ಯ ಧನುಷ್ ರಂಗನಾಥ್ ಮನವಿ ಮಾಡಿದ್ದಾರೆ.

ಟಿ.ಬಿ.ಜಯಚಂದ್ರ ಅವರು ಕಳ್ಳಂಬೆಳ್ಳ ಕ್ಷೇತ್ರದ ಶಾಸಕರಾಗಿದ್ದ ಸಂದರ್ಭದಲ್ಲೇ ಬರಪೀಡಿತ ತಾಲೂಕುಗಳಾದ ಶಿರಾ, ಪಾವಗಡ, ಚಿಕ್ಕನಾಯಕನಹಳ್ಳಿ ತಾಲೂಕುಗಳಿಗೆ ಭದ್ರೆ ನೀರು ಹರಿಸಬೇಕೆಂದು ಕೃಷ್ಣ ಕೊಳ ನೀರಾವರಿ ಹೋರಾಟ ಸಮಿತಿ ರಚಿಸಿ ಹೋರಾಟ ಮಾಡಿದ್ದರು. ಅದೃಷ್ಟವಶತ್ ಸಣ್ಣ ನೀರಾವರಿ ಸಚಿವರಾದ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಮನವೊಲಿಸಿ ಭದ್ರಾ ಯೋಜನೆಗೆ ಜಾರಿ ಮಾಡಿಸಿ ಚಿತ್ರದುರ್ಗ ಜಿಲ್ಲೆಯ ವಾಣಿ ವಿಲಾಸ ಸಾಗರಕ್ಕೆ ಭದ್ರೆ ನೀರು ಹರಿಯುವಂತೆ ಮಾಡಿದರು. ಅಲ್ಲದೆ ಶಿರಾ, ಚಿಕ್ಕನಾಯಕನಹಳ್ಳಿ, ಪಾವಗಡ ತಾಲೂಕಿಗೆ ನೀರು ಹರಿಸಲು ಕಾಮಗಾರಿ ಆರಂಭಿಸಿದರು.

ಬಹುಮುಖ್ಯವಾಗಿ ಶಿರಾ ಕ್ಷೇತ್ರಕ್ಕೆ ಹೇಮಾವತಿ ನೀರು ತೆಗೆದುಕೊಂಡು ಹೋಗಿ ಇತಿಹಾಸ ಪುಟದಲ್ಲಿ ದಾಖಲಾಗಿದ್ದಾರೆ. ಅಂದರೆ ಕಾವೇರಿ ಬೇಸನ್‌ನಿಂದ ಕೃಷ್ಣ ಬೇಸನ್‌ಗೆ ನೀರು ತಂದ ಕೀತಿ ಇವರದಾಗಿದೆ. ಇದಕ್ಕಾಗಿ ತಮಿಳುನಾಡಿನ ಕಿತಾಪತಿಯ



ವಿರುದ್ಧ ರಾಜಕಾರಣಿಯಾಗಿದ್ದರೂ ಸಹ ಕಪ್ಪು ಕೋಟ್ ಧರಿಸಿ ಕೋರ್ಟ್‌ನಲ್ಲಿ ವಾದ ಮಾಡಿ ಗೆಲ್ಲುವ ಮೂಲಕ ಛಲದಂಕ ಮಲ್ಲ ಎನ್ನಿಸಿಕೊಂಡಿದ್ದಾರೆ. ಅಲ್ಲದೆ ರಾಜ್ಯಾಧ್ಯಂತ ನೂರಾರು ಬ್ಯಾರೇಜ್, ಚೆಕ್‌ಡ್ಯಾಮ್ ಕಟ್ಟಿ ನೀರು ಸಂಗ್ರಹಿಸಿ ಅಂತರ್ಜಲ ವೃದ್ಧಿಗೆ ಕಾರಣರಾಗಿ ರೈತ ಸ್ನೇಹಿಯಾಗಿದ್ದಾರೆ.

ಈಗ ರಾಜ್ಯದಲ್ಲಿ ಪ್ರಗತಿಯಲ್ಲಿರುವ ಭದ್ರ ಮೇಲ್ದಂಡೆ, ಕೃಷ್ಣ ಮೇಲ್ದಂಡೆ, ಎತ್ತಿನಹೊಳೆ ಯೋಜನೆ, ಕಳಸಾ ಮತ್ತು ಬಂಡೂರಿ ನಾಲಾ ತಿರುವು ಸೇರಿದಂತೆ ಅನೇಕ ನೀರಾವರಿ ಯೋಜನೆಗಳನ್ನು ಬಹುಬೇಗ ಪೂರೈಸಬೇಕಿದೆ. ಬಹು ಮುಖ್ಯವಾಗಿ ಪಾದಯಾತ್ರೆಯ ಮೂಲಕ ದೇಶದ ಗಮನ ಸೆಳೆದ ಮೇಕೆದಾಟು ಯೋಜನೆ ಅನುಷ್ಠಾನ ಆಗಬೇಕಿದೆ. ಅಲ್ಲದೆ ಚಿಕ್ಕನಾಯಕನಹಳ್ಳಿ ಹಾಗೂ ಶಿರಾಕ್ಕೆ ನೀರು ಕೊಡುವ ಎತ್ತಿನಹೊಳೆ, ಭದ್ರಾ ಹಾಗೂ ಹೇಮಾವತಿ ಯೋಜನೆಗೆ ಚುರುಕು ಮುಟ್ಟಿಸಿ ಬರ ಪೀಡಿದ ಪ್ರದೇಶ ಎಂಬ ಹಣೆ ಪಟ್ಟಿಯಿಂದ ಬಿಡುಗಡೆ ಗೊಳಿಸಬೇಕಿದೆ ಎಂದು ವಿವರಿಸಿದರು.

ಸಣ್ಣ ನೀರಾವರಿ ಖಾತೆಯನ್ನು ಸಮರ್ಥವಾಗಿ ನಿಭಾಯಿಸಿರುವ ಟಿ.ಬಿ.ಜಯಚಂದ್ರ ಅವರಿಗೆ ಜಲಸಂಪನ್ಮೂಲ ಖಾತೆ ನೀಡಿದರೆ ರಾಜ್ಯದಲ್ಲಿ ಪ್ರಗತಿಯಲ್ಲಿರುವ ನೀರಾವರಿ ಯೋಜನೆಗಳನ್ನು ಯಾವುದೇ ಎಡರುತೊಡರಿಲ್ಲದೆ ಪೂರೈಸುತ್ತಾರೆ. ಜಯಚಂದ್ರ ಅವರ ಸಾಮರ್ಥ್ಯ ಹಾಗೂ ನೀರಾವರಿ ಕ್ಷೇತ್ರದಲ್ಲಿ ಅವರಿಗಿರುವ ಜ್ಞಾನ ಮತ್ತು ರೈತ ಮೇಲಿನ ಕಳಾಜಿಯನ್ನು ಈಗಾಗಲೇ ಮನಗಂಡಿರುವ ಸಿದ್ದರಾಮಯ್ಯ ಅವರು ತಮ್ಮ ಸಚಿವ ಸಂಪುಟದಲ್ಲಿ ಜಲಸಂಪನ್ಮೂಲ ಖಾತೆ ನೀಡುವಂತೆ ರಂಗನಾಥ್ ಒತ್ತಾಯಿಸಿದ್ದಾರೆ.

# 13 ಸಿದ್ದರಾಮಯ್ಯಗೆ ಲಕ್ಕಿ ನಂಬರ್?

ಬೆಂಗಳೂರು: ಮೇ 10ರಂದು ನಡೆದ ವಿಧಾನಸಭೆ ಚುನಾವಣೆಯ ಮತ ಎಣಿಕೆ ಮೇ13ರಂದು ನಡೆದು ಕಾಂಗ್ರೆಸ್ 135 ಕ್ಷೇತ್ರಗಳಲ್ಲಿ ಗೆದ್ದು, ಪ್ರಚಂಡ ಬಹುಮತ ಗಳಿಸಿತ್ತು. ಬಳಿಕ, ಸಿಎಂ ಆಯ್ಕೆಗೆ ಕಳೆದ ಮೂರ್ನಾಲ್ಕು ದಿನಗಳಿಂದ ನಡೆದ ಹಗ್ಗಜಗ್ಗಾಟಕ್ಕೆ ತೆರೆಬಿದ್ದಿದೆ.

ಅಳೆದುತೂಗಿ ಸಿದ್ದರಾಮಯ್ಯ ಅವರನ್ನು ಮುಂದಿನ ಮುಖ್ಯಮಂತ್ರಿಯಾಗಿ ಕಾಂಗ್ರೆಸ್ ಹೈಕಮಾಂಡ್ ಆಯ್ಕೆ ಮಾಡಿದೆ.

ರಾಜ್ಯದ ಮುಖ್ಯಮಂತ್ರಿಯಾಗಿ ಎರಡನೇ ಬಾರಿಗೆ ಅವರು ಇದೇ 20ರಂದು ಅವರು ಪ್ರಮಾಣವಚನ ಸ್ವೀಕರಿಸುತ್ತಿದ್ದಾರೆ.

2013ರಲ್ಲಿ ಮೊದಲ ಬಾರಿಗೆ ಮುಖ್ಯಮಂತ್ರಿಗಾದಿ ಏರಿದ್ದ ಅವರು ಪೂರ್ಣಾವಧಿ ಪೂರೈಸಿದ್ದರು.

ಆ ಮೂಲಕ ಪೂರ್ಣ ಅಧಿಕಾರಾವಧಿ ಮುಗಿಸಿದ ರಾಜ್ಯದ ಮೂರನೇ ಮುಖ್ಯಮಂತ್ರಿ ಎಂಬ ಖ್ಯಾತಿ ಗಳಿಸಿದ್ದರು.



ಅಂದಹಾಗೆ, 2013, ಮೇ 13ರಂದು ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದರು.

ಈ ಬಾರಿಯೂ ಮೇ.13ರಂದು ವಿಧಾನಸಭೆ ಚುನಾವಣೆಯ ಮತ ಎಣಿಕೆ ನಡೆದು ಕಾಂಗ್ರೆಸ್ ಅಧಿಕಾರಕ್ಕೆ ಬಂದಿದ್ದು, ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿಯಾಗಿ ಘೋಷಿಸಲಾಗಿದೆ.

ಹಾಗಾದರೆ, 13 ಸಿದ್ದರಾಮಯ್ಯಗೆ ಲಕ್ಕಿ ನಂಬರಾ? ಎಂಬ ಮಾತುಗಳು ಕೇಳಿಬರುತ್ತಿವೆ.

ಕಾಕತಾಳೀಯ ಎಂದಿದ್ದ ಸಿದ್ದರಾಮಯ್ಯ ಚುನಾವಣೆ ಘೋಷಣೆಯಾದ ಬಳಿಕ ಮಾತನಾಡಿದ್ದ ಸಿದ್ದರಾಮಯ್ಯ, ಇವೆಲ್ಲ ಕಾಕತಾಳೀಯ.

ನನಗೆ ಅದರಲ್ಲೆಲ್ಲ ನಂಬಿಕೆ ಇಲ್ಲ ಎಂದು ಉತ್ತರಿಸಿದ್ದರು.

'2013ರಲ್ಲಿ ಮೇ 5ರಂದು ಮತ ಎಣಿಕೆ ನಡೆದು, 13ರಂದು ನಾನು ಸಿಎಂ ಆಗಿ ಪ್ರಮಾಣವಚನ ಸ್ವೀಕರಿಸಿದ್ದೆ. ಈ ಬಾರಿ ಮತ ಎಣಿಕೆ 13ಕ್ಕೆ ಬಂದಿದೆ.

ಇವೆಲ್ಲ ಕಾಕತಾಳೀಯ' ಎಂದು ಹೇಳಿದ್ದರು.

ಸಿದ್ದರಾಮಯ್ಯ ಈವರೆಗೆ 13 ಬಜೆಟ್ ಮಂಡಿಸಿದ್ದಾರೆ.

# ಸ್ಮಾರ್ಟ್ ಸಿಟಿಯಲ್ಲಿ ಗಬ್ಬು ನಾರುತ್ತಿರುವ ಕಸ

ತುಮಕೂರು : ತುಮಕೂರು ನಗರದ ಪ್ರತಿಷ್ಠಿತ ಬಡಾವಣೆ 14ನೇ ವಾರ್ಡಿನ ವಿನಾಯಕ ನಗರದ ಗಣಪತಿ ಪೆಂಡಲ್ ಹಿಂಭಾಗ ಹಾಗೂ ರೇಷ್ಮೆ ಇಲಾಖೆಯ ಹಿಂಭಾಗದ ರಸ್ತೆಯ ಜನನಿಬಿಡ ಪ್ರದೇಶದಲ್ಲಿ ಹಲವು ರೀತಿಯ ತ್ಯಾಜ್ಯವನ್ನು ತಂದು ಹಾಕಿ ಈ ಭಾಗದಲ್ಲಿ ದುರ್ವಾಸನೆ ಬೀರುತ್ತಿದ್ದು ಜನರು ಓಡಾಡಲು ತುಂಬಾ ತೊಂದರೆ ಉಂಟಾಗುತ್ತಿದೆ.

ಇದು ಸ್ಮಾರ್ಟ್ ಸಿಟಿಯೋ ಇಲ್ಲಾ ಗಬ್ಬು ನಾರುತ್ತಿರುವ ಸಿಟಿಯೋ ಎನ್ನುವ ಅನುಮಾನ ವ್ಯಕ್ತವಾಗುತ್ತಿದೆ.

ಹಲವರು ಬಾರಿ ಸಂಬಂದಿಸಿದ ಅಧಿಕಾ–ರಿಗಳಿಗೂ ತಿಳಿಸಿದ್ದರು ಇಂತಕಡೆಯೂ ಸುಳಿಯುತ್ತಿಲ್ಲ ಎಂದು ಸ್ಥಳೀಯ ಜನಗಳು ಹೇಳುತ್ತಿದ್ದಾರೆ.

ಸಂಬಂಧಿಸಿದ ಪಾಲಿಕೆಯ ಅಧಿಕಾರಿಗಳ ಗಮನಕ್ಕೆ ತಂದರು ಯಾರು ತಲೆಕೆಡಿಸಿಕೊಳ್ಳದೆ ಇರುವುದು ನಾಚಿಕೆಗೇಡಿನ ಸಂಗತಿ ಎನ್ನಬಹುದು. ಗಬ್ಬು ನಾರುತ್ತಿರುವ ಹಾಗೂ



ಕೋಳಿ ಅಂಗಡಿಯ ಕಸವನ್ನೆಲ್ಲಾ ಇಲ್ಲಿಗೆ ತಂದು ಹಾಕುತ್ತಿದ್ದು ಇಲ್ಲಿನ ಅವ್ಯವಸ್ಥೆಗೆ ಕಾರಣವಾಗಿದೆ.

ಇದರಿಂದ ಈ ಭಾಗದಲ್ಲಿ ವಾಸವಾಗಿರುವ ಹಾಗೂ ಅಂಗಡಿ ವರ್ತಕರ ಆರೋಗ್ಯದ ಮೇಲೆ ಪರಿಣಾಮ ಬೀರುತ್ತಿದ್ದು, ಹಾಗೂ ಸೊಳ್ಳೆ, ನೊಣಗಳ ಕಾಟದಿಂದ ಈ ಭಾಗ ಜನರಲ್ಲಿ ಹಲವರು ಖಾಯಿಲೆಗಳು ಕಾಣಿಸಿಕೊಳ್ಳುತ್ತಿದ್ದು ಕೂಡಲೇ ಪಾಲಿಕೆ ಆಯುಕ್ತರು ಎಚ್ಚೆತ್ತು ಈ ಜಾಗದಲ್ಲಿ ತ್ಯಾಜ್ಯ ಹಾಕದಂತೆ ಹಾಗೂ ಮೂರ್ತ ವಿಸರ್ಜನೆ ಮಾಡದಂತೆ ತಡೆಯುವ ಮೂಲಕ ಸ್ಮಾರ್ಟ್ ಸಿಟಿ ಎಂದು ನಿರೂಪಿಸಬೇಕು.

ಇಲ್ಲವಾದರೆ ಈ ಭಾಗದಲ್ಲಿ ಆಗುವ ತೊಂದರೆಗಳಿಗೆ ತುಮಕೂರು ಮಹಾನಗರ ಪಾಲಿಕೆಯ ಕಾರಣವಾಗಲಿದೆ.

ಈ ತ್ಯಾಜ್ಯದಿಂದ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದ್ದು, ಇದರಿಂದ ಸಾರ್ವಜನಿಕರ ಆರೋಗ್ಯದ ಮೇಲೆ ತುಂಬಾ ಪರಿಣಾಮ ಬೀರುತ್ತಿದೆ.

ಇದಕ್ಕೆ ಪಾಲಿಕೆ ಕಡಿವಾಣ ಹಾಕದೆ ಹೋದರೆ ಮುಂದಿನ ದಿನಗಳಲ್ಲಿ ಉಗ್ರವಾದ ಹೋರಾಟ ಮಾಡಲಾಗುವುದು ಎಂದು ಸ್ಥಳೀಯರು ತಿಳಿಸಿದ್ದಾರೆ.

# ಹೆಲ್ಮೆಟ್ ಧರಿಸದ ಮಹಿಳಾ ಪಿಎಸ್ಐ: ಪ್ರಕರಣ ದಾಖಲು

ಬೆಂಗಳೂರು : ಪೊಲೀಸರು, ಸಾರ್ವಜನಿಕರು ಸಂಚಾರ ನಿಯಮ ಉಲ್ಲಂಘಿಸಿದರೆ ವಾಹನಗಳನ್ನು ತಡೆದು ಕೇಸ್ ದಾಖಲಿಸಿ ದಂಡ ವಿಧಿಸುತ್ತಾರೆ. ಆದರೆ ಪೊಲೀಸರೇ ಸಂಚಾರ ನಿಯಮ ಉಲ್ಲಂಘಿ–ಸಿದರೆ ಹೇಗೆ? ಎಂದು ಸಾರ್ವಜನಿಕರು ಪ್ರಶ್ನೆ ಮಾಡಿದ್ದರಿಂದ ಇದೀಗ ಮಹಿಳಾ ಪಿಎಸ್ಐ ಒಬ್ಬರ ಮೇಲೆ ಕೇಸು ದಾಖಲಿಸಿ ದಂಡ ವಿಧಿಸಿದ ಘಟನೆ ನಡೆದಿದೆ.



ಮಹಿಳಾ ಸಬ್ ಇನ್ಸ್ಪೆಕ್ಟರ್ ಒಬ್ಬರು ದ್ವಿಚಕ್ರ ವಾಹನದಲ್ಲಿ ಹಿಂಬದಿ ಸವಾರರಾಗಿ ಸಂಚರಿಸುತ್ತಿದ್ದು ಹೆಲ್ಮೆಟ್ ಧರಿಸದೇ ಹೋಗುತ್ತಿದ್ದಾರೆ.

ಇದನ್ನು ಗಮನಿಸಿದ ವ್ಯಕ್ತಿಯೊಬ್ಬರು ಅದರ ಫೋಟೋ ಹಾಗೂ ವಿಡಿಯೋ ಸಮೇತ ಟ್ವೀಟ್ ಮಾಡಿದ್ದರು.

ಅಲ್ಲದೆ, 'ಸ್ವಿಗ್ಗಿ, ಜೊಮಾಟೋ, ಕೊ–ರಿಯರ್ ಹುಡುಗರನ್ನು ಅಡ್ಡಗಟ್ಟುವ ನಗರ ಸಂಚಾರ ಪೊಲೀಸರಿಗೆ ಇವರೇಕೆ ಕಾಣುತ್ತಿಲ್ಲ?' ಎಂದೂ ಪ್ರಶ್ನಿಸಿದ್ದರು.

ಡಿಜಿಪಿ, ಬೆಂಗಳೂರು ಟ್ರಾಫಿಕ್ ಪೊಲೀಸ್ ಹಾಗೂ ಕಬ್ಬನ್ಪಾರ್ಕ್ ಸಂಚಾರ ಪೊಲೀಸರನ್ನು ಮೆನ್ಷನ್ ಮಾಡಿದ್ದ ಈ ಟ್ವೀಟನ್ನು ಸಾವಿರಾರು ಮಂದಿ ವೀಕ್ಷಿಸಿದ್ದು, ಎಚ್ಚೆತ್ತುಕೊಂಡ ಕಬ್ಬನ್ಪಾರ್ಕ್ ಸಂಚಾರ ಪೊಲೀಸರು ಸಂಬಂಧಿತ ಪಿಎಸ್ಐ ವಿರುದ್ಧ ಪ್ರಕರಣ ದಾಖಲಿಸಿ, ದಂಡ ವಿಧಿಸಿದ್ದಾರೆ.

# ಆಸ್ತಿ ತೆರಿಗೆ ಪಾವತಿಸುತ್ತಿರುವ ತೆರಿಗೆದಾರರಿಗೆ ಶೇ5%ರಷ್ಟು ರಿಯಾಯಿತಿಗೆ ಜೂನ್ ವರಗೆ ವಿಸ್ತರಿಸಲು ಮನವಿ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಸ್ವತ್ತುಗಳಿಗೆ ಆಸ್ತಿ ತೆರಿಗೆ ಪಾವತಿಸುತ್ತಿರುವ ತೆರಿಗೆದಾರರಿಗೆ ಶೇ 5% ರಷ್ಟು ರಿಯಾಯಿತಿ ಅನ್ನು ವಿಸ್ತ–ರಿಸುವ ಕುರಿತು ಮನವಿ ಪತ್ರವನ್ನು ಬಿಬಿಎಂಪಿ ಮುಖ್ಯ ಆಯುಕ್ತರಾದ ತುಷಾರ್ ಗಿರಿನಾಥ್ ರವರಿಗೆ ಮಾಜಿ ಆಡಳಿತ ಪಕ್ಷದ ನಾಯಕರಾದ ಎಮ್.ಶಿವರಾಜುರವರು, ಮಾಜಿ ವಿರೋಧ ಪಕ್ಷದ ನಾಯಕರಾದ ಅಬ್ದುಲ್ ವಾಜಿದ್ ರವರು, ಮಾಜಿ ಮಹಾನಗರ ಪಾಲಿಕೆ ಸದಸ್ಯರಾದ ಮೋಹನ್ ಕುಮಾರ್ ರವರು ಮನವಿ ಸಲ್ಲಿಸಿದರು

ಬಿಬಿಎಂಪಿ ವ್ಯಾಪ್ತಿಯಲ್ಲಿನ ಸ್ವತ್ತುಗಳಿಗೆ ಪ್ರತಿ ವರ್ಷ ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಆಸ್ತಿ ತೆ–ರಿಗೆಯನ್ನು ಪಾವತಿಸುವ ತೆರಿಗೆದಾರ–ರಿಗೆ ಶೇ.5 ರಷ್ಟು ರಿಯಾಯಿತಿ ಅನ್ನು ನೀಡಲಾಗುತ್ತಿತ್ತು.

ಆದರೆ, 2023–24ನೇ ಸಾಲಿನಲ್ಲಿ, ಏಪ್ರಿಲ್ ತಿಂಗಳಿನಲ್ಲಿ ಆಸ್ತಿ ತೆರಿಗೆಯನ್ನು ಪಾವತಿಸಿದ ತೆರಿಗೆದಾರರಿಗೆ ಮಾತ್ರ ಶೇ.5 ರಷ್ಟು ರಿಯಾಯಿತಿಯನ್ನು ನೀಡಲಾಗಿರುತ್ತದೆ. ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ವಿಧಾನಸಭಾ ಚುನಾವಣೆ ಪ್ರಕ್ರಿಯೆ ಕೆಲಸಗಳು ಚಾಲ್ತಿಯಲ್ಲಿದ್ದ ಕಾರಣ ಕಂದಾಯ ವಿಭಾಗದ ಎಲ್ಲಾ ಸಿಬ್ಬಂಧಿಗಳು ಚುನಾವಣಾ ಕೆಲಸ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದು,



ಹಲವಾರು ತೆರಿಗೆದಾರರು ನಿಗದಿತ ಸಮಯದಲ್ಲಿ ಆಸ್ತಿ ತೆರಿಗೆಯನ್ನು ಪಾವತಿಸಲು ಸಾಧ್ಯವಾಗಿರುವುದಿಲ್ಲ.

ಪ್ರಸುತ್ತಚುನಾವಣೆಕೆಲಸಕಾರ್ಯಗಳು ಮುಕ್ತಾಯಗೊಂಡಿರುವುದರಿಂದ ಹಾಗೂ ಸಾರ್ವಜನಿಕರ ಆರ್ಥಿಕ ಹಿತದೃಷ್ಟಿಯಿಂದ ಪ್ರತಿ ವರ್ಷದಂತೆ ನಿಗಧಿತ ಸಮಯದಲ್ಲಿ ಆಸ್ತಿ ತೆ–ರಿಗೆಯನ್ನು ಪಾವತಿಸುವ ತೆರಿಗೆದಾರ–ರಿಗೆ ಶೇಕಡ 5%ರಷ್ಟು ರಿಯಾಯಿತಿ ಅನ್ನು 1 ತಿಂಗಳು ವಿಸ್ತರಿಸಬೇಕೆಂದು ಮನವಿ ಸಲ್ಲಿಸಿದರು.

# ಶಿ.ಗು. ಕುಸುಗಲ್ಲ ಪುಸ್ತಕಗಳ ಬಿಡುಗಡೆ

ಬೆಳಗಾವಿ: ಲೇಖಕ ಶಿ.ಗು.ಕುಸುಗಲ್ಲ ಇವರ ಅಭಿನಂದನಾ ಗ್ರಂಥ ಮತ್ತು ಮೂರು ಪುಸ್ತಕಗಳ ಬಿಡುಗಡೆ ಕಾರ್ಯಕ್ರಮವನ್ನು ಇದೇ ದಿ. 20 ರಂದು ಸಂಜೆ 4 ಗಂಟೆಗೆ, ಬೆಳಗಾವಿಯ ಕನ್ನಡ ಸಾಹಿತ್ಯ ಭವನದಲ್ಲಿ, ಮಂಜು ಪ್ರಕಾಶನದಡಿ ಹಮ್ಮಿಕೊಂಡಿದ್ದಾರೆ.

ಸಮಾರಂಭದ ಅಧ್ಯಕ್ಷತೆಯನ್ನು ನಿವೃತ್ತ ಪ್ರಾಚಾರ್ಯರಾದ ಪ್ರೊ. ಎಂ.ಎಸ್. ಇಂಚಲ ವಹಿಸಲಿದ್ದಾರೆ. ಹಿರಿಯ ಪತ್ರಕರ್ತ ಎಲ್.ಎಸ್. ಶಾಸ್ತ್ರಿ ಕೃತಿಗಳನ್ನು ಬಿಡುಗಡೆಗೊಳಿಸಲಿದ್ದಾರೆ.

ಅತಿಥಿಗಳಾಗಿ ಡಾ.ಎಚ್. ಬಿ.ಕೋಲ್ಕಾರ, ಮುಖ್ಯಸ್ಥರು, ಕನ್ನಡ ವಿಭಾಗ, ಆರ್. ಪಿ.ಡಿ. ಕಾಲೇಜು, ಬೆಳಗಾವಿ, ಹಾಗೂ ಜಿ. ರಾಮಯ್ಯ, ಉಪ ನಿರ್ದೇಶಕರು, ಸಾರ್ವಜನಿಕ ವಾಚನಾಲಯ, ಬೆಳಗಾವಿ, ಆಗಮಿಸಲಿದ್ದಾರೆ. ಕೃತಿಗಳ ಅವಲೋಕನವನ್ನು ಡಾ. ಮೈತ್ರೇಯಿಣಿ ಗದಿಗೆಪ್ಪಗೌಡರ, ಖ್ಯಾತ ವಾಗ್ಮಿಗಳು ಮಾಡಲಿರುವರು.

# ಹಜ್ ಯಾತ್ರಾರ್ಥಿಗಳಿಗೆ ಲಸಿಕಾ ಶಿಬಿರ

ಬೆಳಗಾವಿ: ಪ್ರತಿ ವರ್ಷ ನೂರಾರು ಮುಸ್ಲಿಂ ಬಾಂಧವರು ಬಕ್ರಿ ಈದ್ ಸಂದರ್ಭದಲ್ಲಿ ಹಜ್ ಯಾತ್ರೆಗೆ ತೆರಳುತ್ತಾರೆ.

ಈ ವರ್ಷವೂ ಹಜ್ ಸಮಿತಿಯಿಂದ ಆಯ್ಕೆಯಾದ ಮತ್ತು ಸ್ವಂತ ಖರ್ಚಿನಲ್ಲಿ ಹೋಗುವ ಯಾತ್ರಾರ್ಥಿಗಳಿಗೆ ಲಸಿಕೆ ಕಡ್ಡಾಯವಾಗಿದೆ.

ಆದ್ದರಿಂದ ಗುರುವಾರ ಬೆಳಗಾವಿಯ ಅಂಜುಮನ್ ಸಭಾಂಗಣದಲ್ಲಿ ಆರೋಗ್ಯ ಇಲಾಖೆ ಅಂಜುಮನ್ ಇಸ್ಲಾಂ ಸಹಯೋಗದಲ್ಲಿ ಲಸಿಕಾ ಶಿಬಿರ ನಡೆಸಲಾಯಿತು.ಜಿಲ್ಲಾ ಆರೋಗ್ಯ



ಇಲಾಖೆಯ ನೌಕರರು ಹಾಗೂ ಅಧಿಕಾರಿಗಳು ಸುಮಾರು 400ಕ್ಕೂ ಹೆಚ್ಚು ಜನರ ಆರೋಗ್ಯ ತಪಾಸಣೆ ನಡೆಸಿ, ಲಸಿಕೆ ಹಾಕಿದರು.

ಈ ಶಿಬಿರದಲ್ಲಿ ಭಾಗವಹಿಸಿದ ಮಾಜಿ ಶಾಸಕ ಎ. ಫಿರೋಜ್ ಸೇಠ್ ಯಾತ್ರಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕೇಂದ್ರ ಹಜ್ ಸಮಿತಿಯಿಂದ ಪ್ರತಿ ವರ್ಷ ವಿವಿಧ ರಾಜ್ಯಗಳಿಂದ ಲಕ್ಷಗಟ್ಟಲೆ ಜನರನ್ನು ಆಯ್ಕೆ ಮಾಡಿ ಹಜ್ ಯಾತ್ರೆಗೆ ಕಳುಹಿಸಲಾಗುತ್ತದೆ.

ಎಲ್ಲಾ ಹಜ್ ಯಾತ್ರಾರ್ಥಿಗಳು ಸರ್ಕಾರದ ನಿಯಮಗಳನ್ನು ಪಾಲಿಸಬೇಕು, ನಮ್ಮ ದೇಶದ ಭದ್ರತೆ, ಸಹೋದರತ್ವ ಮತ್ತು ಶಾಂತಿಗಾಗಿ ಪ್ರಾರ್ಥಿಸಬೇಕು ಎಂದು ಅವರು ಮನವಿ ಮಾಡಿದರು. ಈ ಸಂದರ್ಭದಲ್ಲಿ ಅಂಜುಮನ್ ಸಂಸ್ಥೆಯ ಕಾರ್ಯದರ್ಶಿ ಹಾಗೂ ಕಾರ್ಪೋರೇಟರ್ ಸಮೀವುಲ್ಲಾ ಮಾಡಿವಾಲೆ, ಬಾಬುಲಾಲ ಮುಜಾವರ, ಗಫೂರ್ ಘೀವಾಲೆ ಮೊದಲಾದವರು ಉಪಸ್ಥಿತ–ರಿದ್ದರು.

# ರಾಣಿ ಚನ್ನಮ್ಮ ಪ್ರಶಸ್ತಿ ವಿತರಣೆ

ಬೆಳಗಾವಿ: ಎನ್ಎಸ್ಎಸ್ ಕೋಶದ ಆರ್‌ಸಿಯು ರಾಣಿ ಚನ್ನಮ್ಮ ಪ್ರಶಸ್ತಿಗಳನ್ನು ವಿತ–ರಿಸಲಾಯಿತು.

ಮುದ್ದೇಬಿಹಾಳದ ಮಾತೋಶ್ರೀ ಗಂಗಮ್ಮಾ ವೀರಪ್ಪ ಚಿನವಾರ ಕಲಾ, ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯದ ಎನ್ಎಸ್ಎಸ್ ಘಟಕಕ್ಕೆ ಉತ್ತಮ ಘಟಕ ಎಂದು ಪ್ರಶಸ್ತಿ ನೀಡಲಾಯಿತು.

ಬೆಳಗಾವಿಯ ಕೆ–ಎಲ್ಇ ಸಂಸ್ಥೆಯ ಶಿಕ್ಷಣ ಮಹಾವಿದ್ಯಾಲಯದ ಸಂಜೀವ ತಳವಾರ ಮತ್ತು



ತಾಳಿಕೋಟಿಯ ಎಸ್.ಕೆ.ಕಲಾ ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಡಾ.ದೀಪಾ ಮಾಳಗಿ ಅವರಿಗೆ ಉತ್ತಮ ಕಾರ್ಯಕ್ರಮ ಅಧಿಕಾರಿ ಎಂದು ಪ್ರಶಸ್ತಿ ನೀಡಲಾಯಿತು.

ತಾಳಿಕೋಟಿಯ ಎಸ್. ಕೆ.ಕಲಾ ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಲಾಳೇಸಾಬ ತಳವಾರ ಅವರಿಗೆ ಉತ್ತಮ ಎನ್ಎಸ್ಎಸ್ ಸ್ವಯಂಸೇವಕ ಪ್ರಶಸ್ತಿ ನೀಡಲಾಯಿತು. 2020ರ ಗಣರಾಜ್ಯೋತ್ಸವದ ಪಥ ಸಂಚಲನ ಮತ್ತು ಕಾರ್ಯಕ್ರಮದಲ್ಲಿ ಪಾಲ್ಗೊಂಡ ವಿನಾಯಕ ಶಿಂಧೆ, ಉಮೇಶ ಮೂಲಿಮನಿ, ಆನಂದ ದಳವಾಯಿ, ಅಕ್ಷತಾ ಜಾಧವ ಮತ್ತು ಸಪೂರಬೇಗಮ್ ಅಗಸರ ಅವರಿಗೆ ಸನ್ಮಾನಿಸಲಾಯಿತು. 2021ರ ಗಣರಾಜ್ಯೋತ್ಸವದ ಪಥ ಸಂಚಲನ ಮತ್ತು ಕಾರ್ಯಕ್ರಮದಲ್ಲಿ ಪಾಲ್ಗೊಂಡ ಲಾಲೇಸಾಬ ವಾಲೇಕರ, ಶಿವಾನಂದ ಪೂಜಾರಿ, ಸಂಜೀವಸ್ವಾಮಿ ಹಿರೇಮಠ, ಪ್ರೀತಿ ಕೊರೆಪ್ಪಗೋಳ ಮತ್ತು ಸಖ್ಖುಬಾಯಿ ಬಡಿಗೇರ ಅವರನ್ನು ಸನ್ಮಾನಿಸಲಾಯಿತು.

# ಹಾಸ್ಯಪ್ರಧಾನ ನಾಟಕ



ಬೆಳಗಾವಿ: ಬೆಳಗಾವಿಯ ರಂಗಸಂಪದ ಇವ–ರಿಂದ ಈ ವರ್ಷದ ಎರಡನೇ ಕಾಣಿಕೆಯಾಗಿ ಹಾಸ್ಯಪ್ರಧಾನ ನಾಟಕ 'ಮುದ್ದಣ್ಣನ ಪ್ರಮೋಷನ್ ಪ್ರಸಂಗ' ಇದೇ ದಿ. 21 ರವಿವಾರದಂದು ಸಾಯಂಕಾಲ 6–30 ಗಂಟೆಗೆ ಕೋನವಾಳ ಬೀದಿ ಯಲ್ಲಿರುವ ಲೋಕಮಮಾನ್ಯ ರಂಗಮಂದಿರದಲ್ಲಿ ಪ್ರದರ್ಶನಗೊಳ್ಳಲಿದೆ.

ನಾಟಕದ ರಚನೆ ರಾಜೇಂದ್ರ ಕಾರಂತ ಅವರದಾಗಿದ್ದು ನಿರ್ದೇಶನ ಡಾ. ಅರವಿಂದ ಕುಲಕರ್ಣಿಯವರದ್ದಾಗಿದೆ.

# ಶಾಸಕ ಸತೀಶ ಜಾರಕಿಹೊಳಿಗೆ ಜಲ ಸಂಪನ್ಮೂಲ ಹುದ್ದೆ ನೀಡಿ: ಗೌಡಪ್ಪಗೌಡ

ಬೈಲಹೊಂಗಲ: ಕೆಪಿಸಿಸಿ ಕಾರ್ಯಾಧ್ಯಕ್ಷ, ಉತ್ತರ ಕರ್ನಾಟಕದ ಪ್ರಭಾವಿ ಮುಖಂಡರಾದ ಸತೀಶ ಜಾರಕಿಹೊಳಿ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸಚಿವ ಸಂಪುಟದಲ್ಲಿ ಉಪಮುಖ್ಯಮಂತ್ರಿ ಹುದ್ದೆ ಜೊತೆಗೆ ಜಲ ಸಂಪನ್ಮೂಲ, ಲೋಕೋಪಯೋಗಿ ಇಲಾಖೆ ಸಚಿವ ಸ್ಥಾನ ನೀಡಬೇಕೆಂದು ಕರ್ನಾಟಕ ರಾಜ್ಯ ರೈತ ಸಂಘ, ಹಸಿರು ಸೇನೆ ವಾಸುದೇವ ಮೇಟಿ ಬಣದ ಜಿಲ್ಲಾಧ್ಯಕ್ಷ ಗೌಡಪ್ಪಗೌಡ ಪಾಟೀಲ ಹೇಳಿದರು.

ಅವರು ಗುರುವಾರ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿ, ಬೆಳಗಾವಿ,



ಬಾಗಲಕೋಟ, ವಿಜಯಪುರ, ಧಾರವಾಡ, ಹುಬ್ಬಳ್ಳಿ ರಾಜ್ಯದ ಇನ್ನೂ ಹಲವಾರು ಜಿಲ್ಲೆಗಳಲ್ಲಿ ತಮ್ಮದೇ ಆದ ಛಾಪು ಮೂಡಿಸಿ, ಕಾಂಗ್ರೆಸ ಪಕ್ಷವನ್ನು ಸಂಘಟಿಸಿದ್ದಾರೆ. ಅಧಿಕಾರ ಚುಕ್ಕಾಣಿ ಹಿಡಿಯಲು ಅವರದು ಕೂಡ ಪ್ರಮುಖ ಪಾತ್ರವಾಗಿದೆ.

ಕಾರಣ ಕಾಂಗ್ರೆಸ್ ಸರ್ಕಾರದಲ್ಲಿ ಅವರಿಗೆ ಉನ್ನತ ಸ್ಥಾನಮಾನ ನೀಡಬೇಕೆಂದು ಒತ್ತಾಯಿಸಿದರು. ಅಲ್ಲದೇ ಸವದತ್ತಿ ಭಾಗದಲ್ಲಿ ಕಳೆದ ಎರಡು ದಶಕಗಳಿಂದ ಬಿಜೆಪಿ ಭದ್ರಕೋಟೆಯನ್ನು ಛಿದ್ರಗೊಳಿಸಿ ಕಾಂಗ್ರೆಸ್ ಅಭ್ಯರ್ಥಿ ವಿಶ್ವಾಸ ವೈದ್ಯ ಜಯಗಳಿಸಿದ್ದು ಅವರಿಗೂ ಕೂಡ ಸಚಿವ ಸ್ಥಾನ ನೀಡಬೇಕೆಂದು ಆಗ್ರಹಿಸಿದರು.

ರಾಜ್ಯ ಮಹಿಳಾ ಘಟಕದ ಉಪಾಧ್ಯಕ್ಷೆ ಶ್ರೀದೇವಿ ನಾಯ್ಕರ ಮಾತನಾಡಿ, ರಾಜ್ಯದಲ್ಲಿ ಕಳೆದ ಐದು ವರ್ಷಗಳಿಂದ ಬಿಜೆಪಿ ಸರ್ಕಾರ ಯಾವುದೆ ಅಭಿವೃದ್ದಿ ಕಾರ್ಯ ಕೈಗೊಂಡಿಲ್ಲ.

ಇವರ ಕಾರ್ಯವೈಖರಿಯಿಂದ ಜನತೆ ಬೇಸತ್ತು ಕಾಂಗ್ರೆಸ್ ಪಕ್ಷಕ್ಕೆ ಅಧಿಕಾರ ಚುಕ್ಕಾಣಿ ನೀಡಿದ್ದು ಅಭಿವೃದ್ದಿ ಕಾರ್ಯಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು.

ಉತ್ತರ ಕರ್ನಾಟಕ ಸಮಗ್ರ ಅಭಿವೃದ್ದಿ ಪಥದತ್ತ ಸಾಗಬೇಕಾದರೆ ಸತೀಶ ಜಾರಕಿಹೊಳಿ ಅವರಿಗೆ ಲೋಕೋಪಯೋಗಿ, ಜಲಸಂಪನ್ಮೂಲ ಖಾತೆ ನೀಡಬೇಕು. ಅಲ್ಲದೇ ಶಾಸಕ ಮಹಾಂತೇಶ ಕೌಜಲಗಿ, ವಿಶ್ವಾಸ ವೈದ್ಯ ಅವರಿಗೆ ಸಚಿವ ಸಂಪುಟದ ಸ್ಥಾನಮಾನ ನೀಡಬೇಕೆಂದು ಒತ್ತಾಯಿಸಿದರು.

ಈ ವೇಳೆ ಯಲ್ಲನಾಯ್ಕ ಪಾಟೀಲ, ಸಿದ್ದಪ್ಪ ಖಾಡಿ, ಲಕ್ಷ್ಮಣ ಪೂಜೇರಿ, ಹನಮಂತ ನಾಯ್ಕರ, ಹೂವಕ್ಕ ಹಡಪದ, ಹನಮಂತ ದೇಸಾಯಿ, ಮೆಹಬೂಬ ಧಾರವಾಡ, ರುಕ್ಮವ್ವ ಸಾವಳಗಿ, ರುದ್ರಮ್ಮ ನಾಯ್ಕರ, ಸಾವಕ್ಕಾ ಮಾತಾರಿ ಮುಂತಾದವರು ಇದ್ದರು.

# ಎನ್ಎಸ್ಎಸ್ ಮೂಲಕ ಸಮಾಜ ಉನ್ನತಿಗೆ ಶ್ರಮಿಸಿ

ಬೆಳಗಾವಿ: ರಾಷ್ಟ್ರೀಯ ಸೇವಾ ಯೋಜನೆ (ಎನ್–ಎಸ್ಎಸ್) ಘಟಕಗಳ ಮೂಲಕ ಸ್ವಯಂಸೇವಕರನ್ನು ಮೂಲಕ ಸಮಾಜದಲ್ಲಿ ಬಹಳಷ್ಟು ಬದಲಾವಣೆಗಳನ್ನು ತರಬಹುದಾಗಿದೆ.

ಆದ್ದರಿಂದ ಎನ್ಎಸ್ಎಸ್ ಮುಖಾಂತರ ಸಮಾಜದ ಉನ್ನತಿಗೆ ಶ್ರಮಿಸಬೇಕು ಎಂದು ಎನ್–ಎಸ್ಎಸ್ ಪ್ರಾಂತೀಯ ಕೇಂದ್ರದ ಯುವ ಅಧಿಕಾ–ರಿಗಳು ವೈ.ಎಂ.ಉಪ್ಪಿನ ಹೇಳಿದರು.

ರಾಣಿ ಚನ್ನಮ್ಮ ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಕೋಶದ ನೇತೃತ್ವದಲ್ಲಿ ವಿವಿಯ ಕುವೆಂಪು ಸಭಾಭವನದಲ್ಲಿ ಗುರುವಾರ ಜರುಗಿದ ರಾಣಿ ಚನ್ನಮ್ಮ ಪ್ರಶಸ್ತಿ ಪ್ರದಾನ ಸಮಾರಂಭ ಮತ್ತು ಎನ್ಎಸ್ಎಸ್ ಕಾರ್ಯಕ್ರಮ ಅಧಿಕಾರಿಗಳಿಗೆ ಒಂದು ದಿನದ ತರಬೇತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಎನ್ಎಸ್ಎಸ್ ಕಾರ್ಯಕ್ರಮ ಅಧಿಕಾರಿಗಳು ತಮ್ಮ ಕಾಲೇಜಿನ ಘಟಕದ ವಿದ್ಯಾರ್ಥಿಗಳು ಮತ್ತು ಸ್ವಯಂಸೇವಕರ ಮೂಲಕ ಹಲವಾರು ಸಮಾಜ ಉಪಯೋಗಿ ಕಾರ್ಯಕ್ರಮ ಹಮ್ಮಿಕೊಳ್ಳಬಹುದು. ವೃಕ್ಷಾಪರೋಹಣ, ರಕ್ತದಾನ ಶಿಬಿರ, ಸಾಕ್ಷರತೆ, ಮತದಾನ ಮತ್ತು ಪೋಲೀಯೊ ಜಾಗೃತಿ ಹೀಗೆ ಅನೇಕ ಕಾರ್ಯಕ್ರಮ ಮಾಡಲಾಗುತ್ತದೆ.



ವಾರ್ಷಿಕ ಶಿಬಿರಗಳ ಮೂಲಕ ದತ್ತು ಪಡೆದ ಗ್ರಾಮದಲ್ಲಿ ಶ್ರಮದಾನದ ಜೊತೆಗೆ ವಿವಿಧ ಜಾಗೃತಿ ಕಾರ್ಯಕ್ರಮ ಆಯೋಜಿಸಿ, ಅಲ್ಲಿನ ಗ್ರಾಮಸ್ಥರಿಗೆ ಸ್ವಾವಲಂಬಿ ಮತ್ತು ಪ್ರಗತಿ ಹೊಂದಿದ ಗ್ರಾಮದ ಪರಿಕಲ್ಪನೆ ನೀಡಬೇಕು ಎಂದು ತಿಳಿಸಿದರು.

ಮುಂಬರುವ ದಿನದಲ್ಲಿ ಎನ್ಎಸ್ಎಸ್ ಎರಡು ಮುಖ್ಯ ಕಾರ್ಯಕ್ರಮಗಳು ಹಮ್ಮಿಕೊಳ್ಳಲಿದೆ. ಗ್ರಾಮಗಳಲ್ಲಿ ನೆಲೆಸಿದರು ಶಿಕ್ಷಣ ತೊರೆದ ಮತ್ತು ನಿರುದ್ಯೋಗ ಯುವಕರ ಸಮೀಕ್ಷೆ ಮಾಡುವುದು. ನನ್ನ ಹಳ್ಳಿ – ನನ್ನ ಮಣ್ಣು ಎಂಬ ಘೋಷವಾಕ್ಯದ ಅಡಿಪಾಯದಲ್ಲಿ ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ 10 ಸ್ವಯಂಸೇವಕರನ್ನು ಆ ಗ್ರಾಮ ಪಂಚಾಯಿತಿಯ ಸ್ಥಳಿಯ ವಿಶೇಷತೆಗಳನ್ನು ಪ್ರಚಾರ ಗೊಳಿಸುವ ನಿಟ್ಟಿನಲ್ಲಿ ಸಿದ್ಧಪಡಿಸಿವುದು ಆಗಿದೆ.

ಹಾಗಾಗಿ ಎಲ್ಲ ಕಾರ್ಯಕ್ರಮ ಅಧಿಕಾರಿಗಳು ತಮ್ಮ ವೈಯಕ್ತಿಕ ಮತ್ತು ವೃತ್ತಿ ಕಾರ್ಯಗಳ ಜೊತೆಗೆ ಎನ್–ಎಸ್ಎಸ್ ಕಾರ್ಯಕ್ಕೂ ಹೆಚ್ಚು ಮಹತ್ವ ನೀಡಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಆರ್‌ಸಿಯು ಮೌಲ್ಯಮಾಪನ ಕುಲಸಚಿವ ಪ್ರೊ. ಶಿವಾನಂದ ಗೊರನಾಳೆ ಮಾತನಾಡಿ, ಎನ್ಎಸ್ಎಸ್‌ನಲ್ಲಿ ತೊಡಗಿಸಿಕೊಳ್ಳುವ ಮೂಲಕ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು ಬಹಳಷ್ಟು ಕೌಶಲಗಳಲ್ಲಿ ಪರಿಣಿತಿ ಪಡೆಯುತ್ತಾರೆ. ಅದ್ದರಿಂದ ಪಿಎಚ್.ಡಿ ಮತ್ತು ಸಂಶೋಧನೆ ಕಾರ್ಯಗಳಿಗೆ ನೀಡಿದಷ್ಟು ಮಹತ್ವ ಎನ್ಎಸ್–ಎಸ್ ಘಟಕ ಮತ್ತು ಸ್ವಯಂಸೇವಕರಿಗೂ ನೀಡಬೇಕು. ಆಗ ಮಾತ್ರ ಬಹಳಷ್ಟು ಸಕಾರಾತ್ಮಕ ಬದಲಾವಣೆಗಳನ್ನು ಸಮಾಜದಲ್ಲಿ ತರಲು ಸಾಧ್ಯ ಎಂದರು.

ಆರ್‌ಸಿಯು ಎನ್ಎಸ್ಎಸ್ ಸಂಯೋಜನಾಧಿಕಾರಿ ಪ್ರೊ. ಕಮಾಲಾಕ್ಷಿ ತಡಸದ ಪ್ರಾಸ್ತಾವಿಕವಾಗಿ ಮಾತನಾಡಿದರು. ಆರ್‌ಸಿಯು ಎನ್ಎಸ್ಎಸ್ ಅಧಿಕಾರಿ ಡಾ. ನಂದಿನ ದೇವರಮನಿ ಪ್ರಶಸ್ತಿ ಸಮಾರಂಭ ನಡೆಸಿಕೊಟ್ಟರು.

ಚಿಕ್ಕೋಡಿ ಸಂಯೋಜಕರಾದ ಶಂಕರ ನಿಂಗನೂರ ಪರಿಚಯಿಸಿದರು. ವಿಜಯಪುರ ಜಿಲ್ಲೆ ಸಂಯೋಜಕ ಪ್ರಕಾಶ ರಾಥ–ೋಡ ನಿರೂಪಿಸಿದರು. ಡಾ.ಪಿ.ನಾಗರಾಜ ವಂದಿಸಿದರು.

# ಮಕ್ಕಳು ಒಳ್ಳೆಯ ಸ್ಥಾನಕ್ಕೆ ಬರಲು ನಾವು ಪಾಲಕರು ಗಮನಹರಿಸುವುದು ಒಳ್ಳೆಯದು: ಸಿಟಿ ಎಸಿಪಿ ಸಿದ್ದನಗೌಡ ಪಾಟೀಲ್



ಬೆಳಗಾವಿ: ಬೆಳಗಾವಿಯಲ್ಲಿ ಅಚ್ಚುಕಟ್ಟಾಗಿ 2023ರ ಚುನಾವಣೆಯ ಕಾರ್ಯದಲ್ಲಿ ಕಾರ್ಯನಿರ್ವಹಿಸಿದ್ದ ಎಪಿಎಂಸಿ ಪೊಲೀಸ್ ಠಾಣೆ ಸಿಬ್ಬಂದಿಗಳು ಔತಣ ಕೂಟ ಕಾರ್ಯಕ್ರಮ ಹಾಗೂ ಪೊಲೀಸ್ ಸಿಬ್ಬಂದಿಗಳ ಮಕ್ಕಳು ಎಸ್ಎಸ್ಎಲ್‌ಸಿ ಮತ್ತು ಪಿಯುಸಿ ಎಲ್ಲಿ ಅತ್ಯುತ್ತಮ ಅಂಕಗಳನ್ನು ಪಡೆದುಕೊಂಡಿರುವ ಮಕ್ಕಳಿಗೆ ಈ ಕಾರ್ಯಕ್ರಮದಲ್ಲಿ ಸನ್ಮಾನಿಸಿದರು.

ಎಸಿಪಿ ಮಾತನಾಡಿ ಮನೆಯಲ್ಲಿ ಮೊಬೈಲ್ ಫೋನ್ ಬಳಕೆ ಒಳ್ಳೆಯದು ಕೆಟ್ಟದುಕ್ಕು ಇದೆ. ಆದರೆ ಒಳ್ಳೆಯದಕ್ಕೆ ಬಳಸಿ ನಮ್ಮ ಮಕ್ಕಳು ಮುಂದಿನ ಭವಿಷ್ಯದಲ್ಲಿ ಅತಿ ಉನ್ನತ ಸ್ಥಾನ ಪಡೆದುಕೊಳ್ಳಬೇಕು ಎಂದು ನನ್ನ ಅಭಿಪ್ರಾಯ ಎಂದು ನಗರದ ಎಪಿಎಂಸಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ರಾಯಲ್ ಗಾರ್ಡನ್ ಕುಮಾರಸ್ವಾಮಿ ಲೇಔಟ್ ಇಲ್ಲಿ ಕಾರ್ಯಕ್ರಮದಲ್ಲಿ ಎಸಿಪಿಯಾದ ಸಿದ್ದನಗೌಡ ಪಾಟೀಲ್ ಕಿವಿಮಾತು ಹೇಳಿದರು

BELAGAVI VARADI KANNADA DAILY MORNING : Editor, Printer, Publisher & Owned By : **Satish Basavani Gudagenatti,** Basavani House No.53, Ashray Colony, Sarathi Nagar, Tv Center - 590019, TQ & DIST Belagavi, Karnataka.

Printed At : LAXMI PRINTERS, No.627. Auto Nagar - 590016.TQ & DIST Belagavi, Karnataka Mob : 9900332089